# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 281 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 17.05.2025 • ಶನಿವಾರ • ಪುಟ:04 • ಬೆಲೆ:2
Volume:02 • Issue: 281 • PRGI No:KARKAN/2023/88055 • VIJAYANAGARA • 17.05.2025 • Saturday • Page:04 • Rs:2












**ನಿನಗೆ ನೀನೇ ಬೆಳಕು**

ಪ್ರಯತ್ನ ಯಾವಾಗಲು
ರಹಸ್ಯವಾಗಿರಲಿ, ಬಂದ ಫಲ ಮಾತ್ರ
ಜನರಿಗೆ ಕಾಣಲಿ
– ದ.ರಾ.ಬೇಂದ್ರೆ

**ದೇವಾಲಯ ದರ್ಶನ**



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ
ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ
–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

**ಮೈಕ್ರೋ ನ್ಯೂಸ್**

## ವೃದ್ಧಾಶ್ರಮ ಪ್ರಾರಂಭಿಸಲು ಸ್ವಯಂ ಸೇವೆ ಸಂಸ್ಥೆಗಳಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
ಜಿಲ್ಲೆಯ ಹರಪನಹಳ್ಳಿ ಉಪವಿಭಾಗದ ವ್ಯಾಪ್ತಿಯಲ್ಲಿ ಹಿರಿಯ ನಾಗರಿಕರ ವೃದ್ಧಾಶ್ರಮವನ್ನು ಪ್ರಾರಂಭಿಸಲು ಅರ್ಹ ಸ್ವಯಂ ಸೇವಾ ಸಂಸ್ಥೆಗಳ ಅರ್ಜಿ ಅಹ್ವಾನಿಸಲಾಗಿದೆ. ಅಸಕ್ತಿಯುಳ್ಳ ಅರ್ಹ ಸಂಸ್ಥೆಯವರು ಮೇ.17 ರಿಂದ ಜೂ.16 ರೊಳಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕಚೇರಿ, ಆಗಾಪೆ ಎಜಿ ಪ್ರಾರ್ಥನಾಲಯ ಎದುರು ರಸ್ತೆ, ಡಿ.ಸಿ. ಸಿವಿಲ್ ಇಂಜಿಯರ್ ಕಟ್ಟಡ, ಅಮರಾವತಿ ಹೊಸಪೇಟೆಯಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳನ್ನು ಸಂರ್ಪಕಿಸುವಂತೆ ತಿಳಿಸಿದ್ದಾರೆ.

## ಇಂದು ಜೆಸ್ಕಾಂ ಗ್ರಾಮೀಣ ಗ್ರಾಹಕರ ಸಂವಾದ ಸಭೆ.

**ಹಂಪಿ ಟೈಮ್ಸ್ ಹೊಸಪೇಟೆ**
ಹೊಸಪೇಟೆ ಗ್ರಾಮೀಣ ಉಪವಿಭಾಗ ಕಚೇರಿಯಲ್ಲಿ ಮೇ.17 ರಂದು ಮಧ್ಯಾಹ್ನ 12 ಗಂಟೆಗೆ, ಗ್ರಾಹಕರ ಸಂವಾದ ಸಭೆಯನ್ನು ಏರ್ಪಡಿಸಲಾಗಿದೆ. ತಾಲೂಕಿನ ಗ್ರಾಮೀಣ ಗ್ರಾಹಕರು ಸಭೆಗೆ ಭಾಗವಹಿಸಿ ವಿದ್ಯುತ್ ಸಮಸ್ಯೆ ಇದ್ದಲ್ಲಿ ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹರಿಸಿಕೊಳ್ಳಬಹುದು ಎಂದು ಕಾರ್ಯ ಮತ್ತು ಪಾಲನಾ ಗ್ರಾಮೀಣ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಹೊಸಪೇಟೆಯಲ್ಲಿ ಸಿಎಂ ಸಿದ್ದರಾಮಯ್ಯ ಹೇಳಿಕೆ | ಮೇ20ರ ಸಮರ್ಪಣ ಸಮಾವೇಶ ಸಿದ್ಧತೆ ಪರಿಶೀಲನೆ

# ಹೇಳಿದ್ದನ್ನ ಮಾಡಿದ್ದೇವೆ, ಮಾಡೋದನ್ನ ಹೇಳ್ತೀವಿ

## 3 ಲಕ್ಷ ಜನರ ಆಗಮಿಸಲಿದ್ದಾರೆ | ಸರ್ಕಾರದ ಕಾರ್ಯಕ್ರಮ ಎಲ್ಲಾ ಶಾಸಕರಿಗೂ ಆಹ್ವಾನವಿದೆ
## ಕೇಂದ್ರದಲ್ಲಿ ಬಿಜೆಪಿ ಇದ್ದರೂ ಕರ್ನಾಟಕದ ಜನ ಕಾಂಗ್ರೆಸ್‌ಗೆ ಆಶೀರ್ವದಿಸಿ ಕೈ ಬಲಪಡಿಸಿದ್ದಾರೆ
## ಗ್ಯಾರಂಟಿಗಳಿಂದ ರಾಜ್ಯ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಗತಿ | ಬಜೆಟ್ ಗಾತ್ರವೂ ವಿಸ್ತಾರವಾಗಿದೆ





**ಹಂಪಿ ಟೈಮ್ಸ್ ಹೊಸಪೇಟೆ**
ಚುನಾವಣೆ ಸಂದರ್ಭದಲ್ಲಿ ನೀಡಿದ ಪ್ರಣಾಳಿಕೆಯಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಿದ್ದು ಕಳೆದೆರಡು ವರ್ಷಗಳಿಂದ 90 ಸಾವಿರ ಕೋಟಿ ರೂ.ಗೂ ಅಧಿಕ ಗ್ಯಾರಂಟಿ ಯೋಜನೆಗಳಿಗಾಗಿ ವೆಚ್ಚ ಮಾಡಿದೆ. ಇದರಿಂದ ರಾಜ್ಯದ ಆರ್ಥಿಕ ಅಭಿವೃದ್ಧಿಯಲ್ಲಿ ಗಣನೀಯ ಸಾಧನೆ ಕಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಿಳಿಸಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಮೇ.20 ರಂದು ಸರ್ಕಾರದಿಂದ ಏರ್ಪಡಿಸಲಾಗಿರುವ ಸರ್ಕಾರದ ಎರಡು ವರ್ಷಗಳ ಸಾಧನಾ ಸಮಾವೇಶ, ಪ್ರಗತಿಯತ್ತ ಕರ್ನಾಟಕ ಸಮರ್ಪಣೆ ಸಂಕಲ್ಪ ಕಾರ್ಯಕ್ರಮವನ್ನು ಸಿದ್ಧತೆ ವೀಕ್ಷಿಸಿ ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದರು,

2023 ರ ಚುನಾವಣೆಯಲ್ಲಿ ಭರ್ಜರಿ ಬಹುಮತದೊಂದಿಗೆ ಪಕ್ಷ ಸರ್ಕಾರ ರಚನೆ ಮಾಡಿತು. ಮೊದಲ ಸಂಪುಟ ಸಭೆಯಲ್ಲಿಯೇ ಕೊಟ್ಟ ಮಾತಿನಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತೀರ್ಮಾನಿಸಲಾಯಿತು. ಆದರೆ ವಿರೋಧ ಪಕ್ಷದವರು ಇದರಿಂದ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಅನೇಕ ಟೀಕೆಯನ್ನು ಮಾಡಿದವು. ಅಂದು ಟೀಕೆ ಮಾಡಿದವರು ನಮ್ಮ ಗ್ಯಾರಂಟಿ ಯೋಜನೆಗಳನ್ನು ಇಂದು ನಕಲು ಮಾಡುವಂತಾಗಿದೆ. ಈಗ ಕರ್ನಾಟಕದ ಗ್ಯಾರಂಟಿ ಯೋಜನೆಗಳು ಇಡೀ ದೇಶಕ್ಕೆ ಮಾದರಿಯಾಗಿವೆ ಎಂದರು.

ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸಿದ್ದು, ತೆರಿಗೆ ಸಂಗ್ರಹ ಪ್ರಮಾಣ ಹೆಚ್ಚಳವಾಗಿದೆ. ಇದಕ್ಕೆ ನಿದರ್ಶನ 2024–25 ರಲ್ಲಿ ಸರ್ಕಾರದ ಬಜೆಟ್ ಗಾತ್ರ ರೂ.3,71,000 ಕೋಟಿ, 2025–26 ರಲ್ಲಿ ಇದು ರೂ.4,09,000 ಕೋಟಿರೂಗಳಿಗೆ ಏರಿಕೆಯಾಗಿರುವುದು ಒಂದು ವರ್ಷದಲ್ಲಿ 38,000 ಸಾವಿರ ಕೋಟಿ ರೂಗಳು ಸರ್ಕಾರದ ಹೆಚ್ಚುವರಿ ಆದಾಯವಾಗಿದೆ. ಬಜೆಟ್ ಮಂಡನೆಯನ್ನು ಸಂಗ್ರಹವಾಗುವ ತೆರಿಗೆ ಮತ್ತು ಆದಾಯವನ್ನು ಆಧರಿಸಿ ಬಜೆಟ್ ಸಿದ್ದಪಡಿಸಲಾಗುತ್ತದೆ.

- ಅಂದು 1,03,000 ಜನರಿಗೆ ಹಕ್ಕುಪತ್ರ ವಿತರಣೆ
- ಕೆಕೆಆರ್‌ಡಿಬಿಗೆ ಕೇಂದ್ರ ಬಿಡುಗಾಸು ನೀಡಿಲ್ಲ
- ಗ್ಯಾರಂಟಿಗೆ 50 ಸಾವಿರ ಕೋಟಿ ಮೀಸಲು
- ಆದಾಯವಿಲ್ಲದೆ ಬಜೆಟ್ ಗಾತ್ರ ಹೆಚ್ಚುತ್ತಿರಲಿಲ್ಲ
- ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಬದ್ಧ
- ಕೈ ಗ್ಯಾರಂಟಿಗಳನ್ನು ಬಿಜೆಪಿ ನಕಲು ಮಾಡಿದೆ
- ತೆರಿಗೆ ಸಂಗ್ರಹ ಪ್ರಮಾಣ ಹೆಚ್ಚಳ

ಆದಾಯ ಇಲ್ಲದೇ ಬಜೆಟ್ ಗಾತ್ರ ಹೆಚ್ಚುತ್ತಿರಲಿಲ್ಲ ಎಂದರು.

ಗ್ಯಾರಂಟಿ ಯೋಜನೆಯಿಂದ ಅಭಿವೃದ್ಧಿ ಕೆಲಸಗಳು ಕುಂಠಿತವಾಗಿವೆ ಎಂದು ವಿರೋಧ ಪಕ್ಷಗಳು ಹೇಳುತ್ತಿವೆ. ಆದರೆ ಗ್ಯಾರಂಟಿ ಜೊತೆಗೆ ಅಭಿವೃದ್ಧಿಗೂ ಅನುದಾನ ನೀಡಿದ್ದು ಅನೇಕ ಕ್ಷೇತ್ರಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಇನ್ನೂರು, ಮುನ್ನೂರು ಮತ್ತು ಏಳುನೂರು ಕೋಟಿವರೆಗೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಇಲ್ಲಿಯವರೆಗೆ ಗ್ಯಾರಂಟಿ ಯೋಜನೆಗಳಿಗಾಗಿ ರೂ.90,000 ಕೋಟಿಗಿಂತಲೂ ಹೆಚ್ಚು ಖರ್ಚು ಮಾಡಲಾಗಿದೆ. ವಿರೋಧ ಪಕ್ಷದವರು ಅಭಿವೃದ್ಧಿಗೆ ಹಣವಿಲ್ಲ ಎಂದು ಹೇಳುತ್ತಿದ್ದು, 2024–25 ರಲ್ಲಿ ಆಸ್ತಿ ಸೃಜನೆಗಾಗಿ ರೂ.51,000 ಕೋಟಿ ವೆಚ್ಚ ಮಾಡಲಾಗಿದೆ. 2025–26 ರಲ್ಲಿ ಆಸ್ತಿ ಸೃಜನೆಗಾಗಿ ರೂ.83,000 ಕೋಟಿ ವರೆಗೆ ವೆಚ್ಚ ಮಾಡುತ್ತಿದ್ದು ಗ್ಯಾರಂಟಿಗೆ ರೂ.50,018 ಕೋಟಿ ಮೀಸಲಿರಿಸಲಾಗಿದೆ. ಇನ್ನೂ ಹೆಚ್ಚುವರಿಯಾಗಿ ಅಗತ್ಯವಿರುವ ಅನುದಾನವನ್ನೂ ಸಹ ಪೂರಕ ಬಜೆಟ್‌ಲ್ಲಿ ನೀಡಲಾಗುತ್ತದೆ. ಆದರೆ ನುಡಿದಂತೆ ನಡೆಯುವ ಸರ್ಕಾರ ನಮ್ಮದಾಗಿದೆ ಎಂದರು.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿಗೆ ಬದ್ದ : ಹೈದರಾಬಾದ್ ಕರ್ನಾಟಕ ಅಭಿವೃದ್ಧಿಗೆ ಕೆಕೆಆರ್‌ಡಿಬಿಗೆ ಕಳೆದ ಬಜೆಟ್‌ನಲ್ಲಿ ರೂ.5,000 ಕೋಟಿ ರೂಗಳು ನೀಡಿದ್ದು, ಈ ವರ್ಷವೂ ಅಷ್ಟೇ ಅನುದಾನ ನೀಡಲಾಗಿದೆ. ಆದರೆ ಹಿಂದಿನ ಸರ್ಕಾರ ಕೊನೆ ವರ್ಷ >>4

## ಸ್ವಯಂ ಉದ್ಯೋಗ ತರಬೇತಿಗೆ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕೇಂದ್ರದಿಂದ ವಿವಿಧ ಉಚಿತ ತರಬೇತಿಗಳಿಗೆ ಅರ್ಜಿ ಅಹ್ವಾನಿಸಲಾಗಿದೆ ಎಂದು ಆರ್‌ಎಸ್‌ಇಟಿಐ ನಿರ್ದೇಶಕ ಗಿರಿಧರ್ ತಿಳಿಸಿದ್ದಾರೆ.

ವಿಜಯನಗರ ಜಿಲ್ಲೆಯ ಗ್ರಾಮೀಣ ಭಾಗದ ಆಸಕ್ತ ನಿರುದ್ಯೋಗಿಗಳಿಗೆ ಯುವಕ, ಯುವತಿಯರಿಗೆ ಮಹಿಳಾ ಹೊಲಿಗೆ ತರಬೇತಿ (30 ದಿನಗಳು), ಬ್ಯೂಟಿ ಪಾರ್ಲರ್ ತರಬೇತಿ (35 ದಿನಗಳು), ಜೂಟ್ ಬ್ಯಾಗ್ ತರಬೇತಿ (13 ದಿನಗಳು), ಮೊಬೈಲ್ ದುರಸ್ತಿ ಮತ್ತು ಸರ್ವಿಸ್ ತರಬೇತಿ (30 ದಿನಗಳು) ಉಚಿತವಾಗಿ ತರಬೇತಿ ನೀಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯ ನೀಡಲಾಗುವುದು. ಅರ್ಜಿದಾರರು ವಿಜಯನಗರ ಜಿಲ್ಲೆಯ ಗ್ರಾಮೀಣ ಭಾಗದವರಾಗಿರಬೇಕು. ಕನಿಷ್ಠ 8 ನೇ ತರಗತಿ ಉತ್ತೀರ್ಣರಾಗಿರಬೇಕು. ವಯೋಮಿತಿ 18 ರಿಂದ 45 ವರ್ಷದೊಳಗಿದ್ದು, ಸ್ವಯಂ ಉದ್ಯೋಗದಲ್ಲಿ ಆಸಕ್ತಿ ಹೊಂದಿರಬೇಕು. ಅರ್ಜಿ ಸಲ್ಲಿಸಲು ಆಧಾರ ಕಾರ್ಡ್, ರೇಷನ್ ಕಾರ್ಡ್, ಅಂಕಪಟ್ಟಿ ಜೆರಾಕ್ಸ್ ಪ್ರತಿಯೊಂದಿಗೆ 3 ಪಾಸ್‌ಪೋರ್ಟ್ ಸೈಜ್ ಪೋಟೋಗಳೊಂದಿಗೆ ನಿರ್ದೇಶಕರ ಕಚೇರಿ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಆವರಣ, ಪೈ ಹೋಟೆಲ್ ಎದರುಗಡೆ, ಬಸ್‌ಸ್ಟಾಂಡ್ ಹತ್ತಿರ ಹೊಸಪೇಟೆ ವಿಳಾಸಕ್ಕೆ ಅರ್ಜಿಗಳನ್ನು ಸಲ್ಲಿಸಬೇಕು. ಆಸಕ್ತ ಅರ್ಹರು ಮೇ.29 ರಂದು ಸಂದರ್ಶನಕ್ಕೆ ಭಾಗವಹಿಸಬೇಕು. ಜೂನ್.2 ರಂದು ತರಬೇತಿ ಪ್ರಾರಂಭವಾಗಲಿವೆ. ಹೆಚ್ಚಿನ ಮಾಹಿತಿಗಾಗಿ ಮೊ.9741987137, 8105001594 ಮತ್ತು 6360467102 ಸಂಪರ್ಕಿಸಲು ತಿಳಿಸಿದ್ದಾರೆ.

## ಮೇಲ್ಸೇತುವೆಗೆ ಕಾರು ಡಿಕ್ಕಿ



**ಹಂಪಿ ಟೈಮ್ಸ್ ಹೊಸಪೇಟೆ**
ನಗರದ ಹೊರವಲಯದ ಜೋಳದರಾಶಿ ಗುಡ್ಡದ ಬಳಿ ವಿರೂಪಾಕ್ಷ ನಾಯಕ ವೃತ್ತದಲ್ಲಿ ಮೇಲ್ಸೇತುವೆ ಕಾಮಗಾರಿ ಅಪೂರ್ಣಗೊಂಡಿದ್ದು, ಸೂಕ್ತ ಸುರಕ್ಷತಾ ಕ್ರಮಗಳನ್ನು ಗುತ್ತಿಗೆದಾರರು ಅನುಸರಿಸದಿರುವುದರಿಂದ ಶುಕ್ರವಾರ ರಾತ್ರಿ ಮಾರುತಿ ಸ್ವಿಫ್ಟ್ ಕಾರು ಮೇಲ್ಸೇತುವೆಗೆ ಡಿಕ್ಕಿ ಹೊಡೆದಿದ್ದು, ಪ್ರಯಾಣಿಕರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಪಾಯದಿಂದ ಪಾರಾಗಿದ್ದಾರೆ. ವಾಹನ ಮುಂಭಾಗ ಜಖಂ ಗೊಂಡಿದೆ. ಅವೈಜ್ಞಾನಿಕ ಮತ್ತು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೇ ಕಾಮಗಾರಿ ನಡೆಸುತ್ತಿರುವವರ ವಿರುದ್ಧ ವಾಹನ ಸವಾರರು ಆಕ್ರೋಶ ವ್ಯಕ್ತಪಡಿಸಿದರು.

# ವಿಜಯನಗರ ಸಂಪೂರ್ಣ ಪೋಡಿ ಮುಕ್ತ ಜಿಲ್ಲೆ

## ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿಕೆ | ರಾಜ್ಯ ಸರ್ಕಾರದಿಂದ ಜಿಲ್ಲೆಗೆ ಮಹತ್ವದ ಕೊಡುಗೆ

**ಹಂಪಿ ಟೈಮ್ಸ್ ಹೊಸಪೇಟೆ**
ತಾಂಡಾ, ಹಟ್ಟಿ, ಹಾಡಿ, ಕ್ಯಾಂಪ್‌ಗಳಲ್ಲಿನ ನಿವಾಸಿಗಳಿಗೆ ಕಂದಾಯ ಇಲಾಖೆಯಿಂದ 1 ಲಕ್ಷ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಣೆ ಮಾಡುವ ಮೂಲಕ ವಿಜಯನಗರ ಜಿಲ್ಲೆಯನ್ನು ಸಂಪೂರ್ಣ ಪೋಡಿ ಮುಕ್ತ ಜಿಲ್ಲೆಯನ್ನಾಗಿಸಿರುವುದು ಸರ್ಕಾರದ ಮಹತ್ವದ ಸಾಧನೆಯಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಮೇ.20 ರಂದು ಜರುಗಲಿರುವ ಸಾಧನಾ ಸಮಾವೇಶ ಕಾರ್ಯಕ್ರಮದ ವೇದಿಕೆಯ ಪೂರ್ವಸಿದ್ಧತೆಯನ್ನು ಪರಶೀಲಿಸಿ ಬಳಿಕ ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದರು, 2023 ರ ಮೇ.13 ರಂದು ರಾಜ್ಯದ ಜನತೆ ನಂಬಿಕೆ ಮತ್ತು ವಿಶ್ವಾಸವನ್ನಿಟ್ಟು ನಮಗೆ 136 ಸೀಟುಗಳನ್ನು ನೀಡುವ ಮೂಲಕ ಅಡಳಿತ ನಡೆಸಲು ಅಧಿಕಾರ ನೀಡಿದ್ದರು. ಸರ್ಕಾರದಿಂದ ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ. ರಾಜ್ಯದ ನುಡಿದಂತೆ ನಡೆದ ಏಕೈಕ ಸರ್ಕಾರ ನಮ್ಮದಾಗಿದೆ. ಪಂಚ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಎರಡು ವರ್ಷ ಪೂರೈಸಿರುವ ರಾಜ್ಯ ಸರ್ಕಾರದ ಸಾಧನೆಯನ್ನು ಸಂಭ್ರಮಿಸುವ ನಿಟ್ಟಿನಲ್ಲಿ ವಿಜಯನಗರದಲ್ಲಿ ವಿಶೇಷವಾಗಿ ಆಚರಿಸಲಾಗುತ್ತಿದೆ. ಸರ್ಕಾರದ ಫಲಾನುಭವಿಗಳಿಗೆ ನವಚೈತನ್ಯ ಮೂಡಿಸಲು ರಾಜ್ಯ ಸರ್ಕಾರದ ಎಲ್ಲಾ ಸಚಿವರು, ಶಾಸಕರುಗಳು ಸೇರಿ ಸಮರ್ಪಣಾ ಸಂಕಲ್ಪವನ್ನು ಸಲ್ಲಿಸಲಾಗುತ್ತದೆ. ಜನರಲ್ಲಿ ಹೊಸ ಶಕ್ತಿ ತುಂಬಬೇಕಿದೆ. ಜನರಿಗೆ ಈ ಎಲ್ಲಾ ಯೋಜನೆಗಳನ್ನು ಪೂರ್ಣಾವಧಿವರೆಗೆ ಸಮರ್ಪಕವಾಗಿ ನೀಡುವ ಭರವಸೆಯನ್ನು ನೀಡುತ್ತೇವೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ವಿವಿಧ ಯೋಜನೆಗಳ ಫಲಾನುಭವಿಗಳು ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ ಎಂದರು.



ಈ ವೇಳೆ ಕೃಷಿ ಸಚಿವರಾದ ಚೆಲುವರಾಯಸ್ವಾಮಿ, ಯೋಜನಾ ಸಚಿವರಾದ ಡಿ.ಸುಧಾಕರ್, ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್, ಬಳ್ಳಾರಿ ಗ್ರಾಮಾಂತರ ಶಾಸಕರಾದ ಬಿ.ನಾಗೇಂದ್ರ, ಸಿಂಧನೂರು ಶಾಸಕರಾದ ಹಂಪನಗೌಡ ಬಾದರ್ಲಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿರಾಜ್ ಶೇಖ್, ಬಳ್ಳಾರಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಬಿ.ವಿ.ಶಿವಯೋಗಿ, ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಸಿಇಒ ಮೊಹಮ್ಮದ್ ನೋಂಗ್ಜಾಯ್ ಅಕ್ರಮ್ ಷಾ ಅಲಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶ್ರೀಹರಿಬಾಬು.ಬಿ.ಎಲ್, ಬಳ್ಳಾರಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಪಂ ಸಿಇಒ ಮೊಹಮ್ಮದ್ ಹ್ಯಾರಿಸ್ ಸುಮೇರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ ಇತರರಿದ್ದರು.

## ಫುಟ್ಬಾಲ್ ತರಬೇತುದಾರರ ಆಯ್ಕೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ಖೇಲೋ ಇಂಡಿಯಾ ಯೋಜನೆ ಅಡಿ ರಾಜ್ಯದಲ್ಲಿ 31 ಜಿಲ್ಲೆಗಳಲ್ಲಿ ಸಣ್ಣ ಖೇಲೋ ಇಂಡಿಯಾ ಕೇಂದ್ರಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿದ್ದು, ಬಳ್ಳಾರಿ ಜಿಲ್ಲೆಯ ಫುಟ್ಬಾಲ್ ಖೇಲೋ ಇಂಡಿಯಾ ಕೇಂದ್ರಕ್ಕೆ ತರಬೇತುದಾರರ ಆಯ್ಕೆಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ.ಗ್ರೇಸಿ ತಿಳಿಸಿದ್ದಾರೆ.

ರಾಷ್ಟ್ರ ಮಟ್ಟದ ಫುಟ್ಬಾಲ್ ಕ್ರೀಡಾಪಟುಗಳು, ಎನ್‌ಐಎಸ್, ಡಿಪ್ಲೋಮಾ ಇನ್ ಫುಟ್ಬಾಲ್ ಆಟ ಅಥವಾ ಎಂ.ಪಿ.ಇಡಿ ಫುಟ್‌ಬಾಲ್ ಆಟದಲ್ಲಿ ವಿಶೇಷತೆ ಮತ್ತು ರಾಷ್ಟ್ರೀಯ ಪದಕ ವಿಜೇತ, ರಾಜ್ಯ ಪದಕ ವಿಜೇತ, ರಾಷ್ಟ್ರೀಯ ಮಟ್ಟದಲ್ಲಿ ಪ್ರಾತಿನಿಧ್ಯ ವಹಿಸಿದ ರಾಜ್ಯದವರು ಅರ್ಜಿ ಸಲ್ಲಿಸಲು ಅರ್ಹರಾಗಿದ್ದು, ಆಸಕ್ತ ಅರ್ಹ ಫುಟ್ಬಾಲ್ ತರಬೇತುದಾರರು ಅರ್ಜಿ ಪಡೆದು ಭರ್ತಿ ಮಾಡಿ ಮೇ 26 ರೊಳಗಾಗಿ ಕಚೇರಿಗೆ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

ಹಂಪಿ ಟೈಮ್ಸ್ HAMPI TIMES

# ದರ್ಗಾಗಳಿಗೆ ಜಾತಿ, ಧರ್ಮದ ಮಿತಿ ಇಲ್ಲ: ಸಿಎಂ ಸಿದ್ದರಾಮಯ್ಯ



**ಹಂಪಿ ಟೈಮ್ಸ್ ಮಂಗಳೂರು:**
ನಾವು ಮೊದಲು ಮನುಷ್ಯರು, ನಂತರ ಭಾರತೀಯರು ಆಮೇಲೆ ಹಿಂದೂಗಳು, ಮುಸ್ಲೀಮರು ಮತ್ತು ಧರ್ಮೀಯರು ಎಂದು ಸಿ.ಎಂ ಸಿದ್ದರಾಮಯ್ಯ ಅವರು ಅಭಿಪ್ರಾಯಪಟ್ಟರು.

ಉಳ್ಳಾಲದ ಶರೀಫುಲ್ ಮದನಿ ದರ್ಗಾದ 22ನೇ ಪಂಚವಾರ್ಷಿಕ ಊರುಸ್ ಮಹೋತ್ಸವದಲ್ಲಿ ಮಾತನಾಡಿದರು. ನಮ್ಮ ಸರ್ಕಾರ ಸಂವಿಧಾನದ ಆಶಯದಂತೆ ಸರ್ವರನ್ನೂ ಸಮಾನವಾಗಿ ಕಾಣುತ್ತದೆ ಎಂದರು. ದೇಶದಲ್ಲಿ ಅನೇಕ ಸೂಫಿ, ಸಾಧು, ಸಂತರು, ಸಾಮಾಜಿಕ ಹರಿಕಾರರು ಬಂದು ಹೋಗಿದ್ದಾರೆ. ಇವರೆಲ್ಲರೂ ಮನುಷ್ಯ ಧರ್ಮವನ್ನು ಪ್ರತಿಪಾದಿಸಿದವರು. ಆದ್ದರಿಂದ ನಾವು ಮಾನವೀಯ ನೆಲೆಯಲ್ಲಿ ಸಮಾಜವನ್ನು ಬೆಸೆಯಬೇಕು. ಉಳ್ಳಾಲ ದರ್ಗಾಕ್ಕೆ ಜಾತಿ, ಧರ್ಮದ ಮಿತಿ ಇಲ್ಲ. ಎಲ್ಲಾ ಜಾತಿ, ಎಲ್ಲಾ ಧರ್ಮದ ಬಡವರ ದರ್ಗಾ. ನಮ್ಮ ಸರ್ಕಾರದ ಕಾರ್ಯಕ್ರಮಗಳೂ ಸರ್ವ ಧರ್ಮ, ಸರ್ವ ಜಾತಿಯವರಿಗೆ ಸಲ್ಲುವಂಥವು ಎಂದರು.



## ಆನಂದ ಬಾಣ




## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**- ಜಾಹೀರಾತು ವ್ಯವಸ್ಥಾಪಕರು.**

6ಜಿಯ ಎಐ-ಚಾಲಿತ ಸಾಧನಗಳು ನಿಮ್ಮ ಅಗತ್ಯಗಳನ್ನು ಮುಂಗಾಣುತ್ತವೆ, ನೀವು ಕೇಳುವ ಮೊದಲೇ ಸೇವೆಗಳನ್ನು ಒದಗಿಸುವಷ್ಟು ಬುದ್ಧಿವಂತವಾಗಿರುತ್ತವೆ. ಇದು ಕೇವಲ ತಂತ್ರಜ್ಞಾನವಲ್ಲ, ಇದೊಂದು ಸುಂದರ ಡಿಜಿಟಲ್ ಲೋಕ.ಬೆಂಗಳೂರಿನ ರಸ್ತೆಗಳಲ್ಲಿ ಡ್ರೈವರ್‌ರಹಿತ ಕಾರುಗಳನ್ನು ಸುರಕ್ಷಿತವಾಗಿ ಓಡಿಸಬಹುದು, ಅಲ್ಲಿನ ಟೆಕ್ ಕಾರಿಡಾರ್‌ನಿಂದ ಬಳ್ಳಾರಿಯ ಕೃಷಿ ಭೂಮಿಗಳವರೆಗೆ, 6ಜಿ ತಂತ್ರಜ್ಞಾನವು ಶಿಕ್ಷಣ, ಕೃಷಿ, ಆರೋಗ್ಯ ಮತ್ತು ವಾಣಿಜ್ಯವನ್ನು ಒಂದು ಡಿಜಿಟಲ್ ಡ್ರೀಮ್ ಲ್ಯಾಂಡ್ ಆಗಿ ಪರಿವರ್ತಿಸಲಿದೆ.

# ವೇಗದ ಹೈವೇ 6ಜಿ ದೂರಸಂಪರ್ಕ


ಒಂದು ಸಂಜೆ, ಬೆಂಗಳೂರಿನ ಕೆಂಗೇರಿಯ ಜಯಣ್ಣ ಅಂಕಲ್ ತಮ್ಮ ಹಳೇ ಫೀಚರ್ ಫೋನ್‌ನಲ್ಲಿ ಫ್ಯಾಮಿಲಿ ಫೋಟೋವನ್ನು ವಾಟ್ಸಾಪ್‌ನಲ್ಲಿ ಕಳುಹಿಸಲು ಒದ್ದಾಡುತ್ತಿದ್ದರು. "ಈ ಫೋನ್ ಒಂದು ಎತ್ತಿನ ಬಂಡಿಯಂತೆ!" ಎಂದು ಗೊಣಗುತ್ತಿದ್ದಾಗ, ಅವರ ಅಣ್ಣನ ಮಗ ಶಿವ, "ಅಂಕಲ್, 5ಜಿ ಫೋನ್ ತಗೊಳ್ಳಿ, ಫೋಟೋ ಸೆಕೆಂಡುಗಳಲ್ಲಿ ಹೋಗುತ್ತದೆ!" ಎಂದ. ಜಯಣ್ಣ ಅಂಕಲ್ ನಗುತ್ತಾ, "5ಜಿ, 6ಜಿ ಎಂದರೇನು? ನಮ್ಮ ಜೀವನಕ್ಕೆ ಇದೆಲ್ಲಾ ಬೇಕಾ!" ಎಂದರು. ಆದರೆ, ದೂರಸಂಪರ್ಕದ ಹೈವೇ ಜಯಣ್ಣ ಅಂಕಲ್‌ನಂತಹ ಸಾಮಾನ್ಯ ಜನರ ಜೀವನವನ್ನು ರೂಪಾಂತರಗೊಳಿಸುತ್ತಿರುವುದಂತೂ ನಿಜ.

### ಈ ಹೈವೇ ಎಲ್ಲಿಂದ ಶುರುವಾಯ್ತು?

ಈ ಪಯಣ ಆರಂಭವಾದದ್ದು 1980ರ ದಶಕದಲ್ಲಿ 1ಜಿ ನಿಂದ. ಜಿ ಅಂದರೆ ಜೆನರೇಶನ್ ಅಥವಾ ತಲೆಮಾರಿನ ಸಂಕ್ಷಿಪ್ತ ರೂಪ. ಅಂದಿನ ದೂರಸಂಪರ್ಕ ಕೇವಲ ಧ್ವನಿ ಕರೆಗಳಿಗೆ ಮಾತ್ರ ಸೀಮಿತ. ಅದೂ ಸರಿಯಾಗಿ ಕೇಳಿಸೋದೆ ದುಸ್ತರ! ಬೆಟ್ಟದ ಮೇಲೆ ನಿಂತು "ಹಲೋ ಹಲೋ" ಅಂದ್ರೆ ಧ್ವನಿ ಕೇಳುತ್ತೋ ಇಲ್ವೋ ಅನ್ನೋ ಶಂಕೆ. ನಂತರ 1990ರಲ್ಲಿ ಬಂದ 2ಜಿ, ಎಸ್‌ಎಂಎಸ್‌ನ್ನು ಜನಪ್ರಿಯಗೊಳಿಸಿತು. 2000ರ ದಶಕದಲ್ಲಿ 3ಜಿಯ ಆಗಮನವು, ಮೊಬೈಲ್ ಇಂಟರ್ನೆಟ್‌ಗೆ ದಾರಿ ಮಾಡಿತು. ಇಮೇಲ್, ಬ್ರೌಸಿಂಗ್ ಎಲ್ಲವೂ ಫಿಂಗರ್ ಟಿಪ್‌ಗಳಲ್ಲಿ! ಆದರೆ, ವೀಡಿಯೋ ಕರೆಗಳ 'ಬಫರಿಂಗ್' ಜನರ ಸಹನೆಗೆ ಪರೀಕ್ಷೆಯೊಡ್ಡುತ್ತಿತ್ತು! 2010ರ ದಶಕದ 4ಜಿ, ನಿಜವಾಗಿಯೂ ಗೇಮ್-ಚೇಂಜರ್. ಯೂಟ್ಯೂಬ್ ಸ್ಟ್ರೀಮಿಂಗ್, ಆನ್‌ಲೈನ್ ಶಾಪಿಂಗ್, ಕ್ರಿಕೆಟ್ ಲೈವ್-ಆಲ್ ಇನ್ ಒನ್ ಗೋ! ಬೆಂಗಳೂರಿನ ಟ್ರಾಫಿಕ್‌ಲ್ಲಿದ್ದರೂ ಮ್ಯಾಚ್ ಮಿಸ್ ಆಗುತ್ತಿಲ್ಲ! ಉಡುಪಿಯ ಮೀನುಗಾರ ಆನ್‌ಲೈನ್ ಮಾರಾಟ ಮಾಡ್ತಿದ್ದಾನೆ!

### 5ಜಿ ಒಂದು ಬುಲೆಟ್ ಟ್ರೈನ್‌ನಂತೆ!

ಈಗ, ನಾವು 4ಜಿ ಮತ್ತು 5ಜಿಗಳ ಮಧ್ಯೆ ಇದ್ದೇವೆ. 5ಜಿ ಸಿಗ್ನಲ್ ಎಲ್ಲೆಡೆ ವ್ಯಾಪಿಸಿಲ್ಲ. ಅನೇಕರ ಬಳಿ ಇರುವುದು 4ಜಿ ಹ್ಯಾಂಡ್ ಸೆಟ್. ಆದರೆ 5ಜಿ ಒಂದು ಡಿಜಿಟಲ್ ಕ್ರಾಂತಿಯನ್ನು ತರುತ್ತಿದೆ. ಇದು ಒಂದು ಬುಲೆಟ್ ಟ್ರೈನ್‌ನಂತೆ, ಸೆಕೆಂಡಿಗೆ 10 ಗಿಗಾಬಿಟ್‌ಗಳ ವೇಗದಲ್ಲಿ ಡೇಟಾವನ್ನು ಸಾಗಿಸುತ್ತದೆ, ಇದರಿಂದ ಒಂದು ಸಿನಿಮಾವನ್ನು ಕ್ಷಣಾರ್ಧದಲ್ಲಿ ಡೌನ್‌ಲೋಡ್ ಮಾಡಬಹುದು. ಡೇಟಾ ಕಳುಹಿಸು ವುದು ಮತ್ತು ಸ್ವೀಕರಿಸುವುದು ಕಣ್ಣು ಮಿಟಕಿಸುವಷ್ಟರಲ್ಲಿ ಆಗುತ್ತದೆ. 5ಜಿ ಕೇವಲ ನಿಮ್ಮ ಸ್ಮಾರ್ಟ್‌ಫೋನ್‌ನ್ನು ವೇಗಗೊಳಿಸುವುದಿಲ್ಲ, ಇದು ವಸ್ತುಗಳ ಜಾಲ (ಇಂಟರ್ನೆಟ್ ಆಫ್ ಥಿಂಗ್ಸ್) ರೂಪದಲ್ಲಿ ಜಗತ್ತನ್ನೇ ಬೆಸೆಯುತ್ತಿದೆ. ಬೆಂಗಳೂರಿನ ಟ್ರಾಫಿಕ್ ಲೈಟ್‌ಗಳಿಂದ ಹಿಡಿದು ಮೈಸೂರಿನ ಆಸ್ಪತ್ರೆಗಳ ರಿಮೋಟ್ ಸರ್ಜರಿ ಯಂತ್ರಗಳು ಮತ್ತು ಕೊಡಗಿನ ಸ್ಮಾರ್ಟ್ ಕೃಷಿ ಸಾಧನಗಳವರೆಗೆ. ನಾವು ಕನಸು ಕಂಡಿದ್ದ 'ಸ್ಮಾರ್ಟ್ ಜಗತ್ತು' ಇಂದು ನಮ್ಮ ಬೆರಳ ತುದಿಗೆ ನಿಲುಕುತ್ತಿದೆ.



ಡಾ. ಎಸ್.ಎಂ. ಶಶಿಧರ್
ಟೆಕ್ ಪರಿಣತರು

Scan For Digital Colourful
HAMPI TIMES E-paper

### ರಮೇಶನ ರಿಮೋಟ್ ಶಾಲೆ

ಕೊಪ್ಪಳದ ರಮೇಶ್ ಒಬ್ಬ ಶಾಲಾ ಶಿಕ್ಷಕ, ಕೋವಿಡ್ ಸಮಯದಲ್ಲಿ ತನ್ನ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳನ್ನು ನಡೆಸಲು ಹೆಣಗಾಡಿದ. "ವೀಡಿಯೊ ಕರೆ ಸದಾ ಕಟ್ ಆಗುತ್ತಿತ್ತು!" ಎಂದು ಅವನು ನೆನಪಿಸಿಕೊಳ್ಳುತ್ತಾನೆ. ಆದರೆ, 5ಜಿ ಆಗಮನದೊಂದಿಗೆ, ರಾಜೇಶ್‌ನ ಶಾಲೆಯು 5ಜಿ-ಆಧಾರಿತ ಡಿಜಿಟಲ್ ತರಗತಿಗಳನ್ನು ಆರಂಭಿಸಿತು. ಈಗ, ಅವನ ವಿದ್ಯಾರ್ಥಿಗಳು ಜೂಮ್‌ನಲ್ಲಿ ಬೆಂಗಳೂರಿನ ತಜ್ಞರೊಂದಿಗೆ ಚರ್ಚೆಯಲ್ಲಿ ಭಾಗವಹಿಸುತ್ತಾರೆ. "5ಜಿ ಒಂದು ಜಾದೂಗಾರನಂತೆ! ನನ್ನ ವಿದ್ಯಾರ್ಥಿಗಳ ಕನಸುಗಳಿಗೆ ರೆಕ್ಕೆ ಕೊಟ್ಟಿದೆ," ಎಂದು ರಾಜೇಶ್ ತನ್ನ ಸ್ನೇಹಿತರಿಗೆ ಉತ್ಸಾಹದಿಂದ ಹೇಳಿದ.




ಇಂದು ವಿಶ್ವ ದೂರಸಂಪರ್ಕ ದಿನ.

### ವೀರಣ್ಣನ ಡಿಜಿಟಲ್ ಕೃಷಿ

ವೀರಣ್ಣ, ಕುರುಗೋಡು ತಾಲೂಕಿನ ಹಿರೇಹಳ್ಳಿಯ ರೈತ, ಅನೇಕ ವರ್ಷಗಳಿಂದ ಅಂಜೂರ ಹಣ್ಣಿನ ಬೇಸಾಯ ಮಾಡುತ್ತಿದ್ದಾರೆ. ಇತ್ತೀಚೆಗೆ, ಅವರ ಕೃಷಿ ಭೂಮಿಯಲ್ಲಿ 5ಜಿ ಆಧಾರಿತ ಸ್ಮಾರ್ಟ್ ಸೆನ್ಸರ್‌ಗಳನ್ನು ಅಳವಡಿಸಿದ್ದಾರೆ. ಈ ಆಧುನಿಕ ಸಾಧನಗಳು ಮಣ್ಣಿನ ತೇವಾಂಶ, ತಾಪಮಾನ, ಗಾಳಿಯ ಚಲನೆಯನ್ನು ನಿಖರವಾಗಿ ಅಳೆಯುತ್ತವೆ. ಈ ಡೇಟಾವು ವೀರಣ್ಣ ಅವರ ಫೋನ್‌ಗೆ ಕ್ಷಣಾರ್ಧದಲ್ಲಿ ಬರುತ್ತದೆ. ವೀರಣ್ಣ ಡ್ರಿಪ್ ನೀರಾವರಿ ವಿಧಾನವನ್ನು ಅಳವಡಿಸಿ ಕೊಂಡಿದ್ದಾರೆ, "ಈಗ ನಾನು ನೀರಾವರಿಯನ್ನು ಫೋನ್‌ನಿಂದಲೇ ನಿಯಂತ್ರಿಸುತ್ತೇನೆ. ನನ್ನ ಬೆಳೆ ಸದಾ ಸುರಕ್ಷಿತ!" ಎಂದು ವೀರಣ್ಣ ಸಂತೋಷದಿಂದ ಹೇಳುತ್ತಾರೆ. 5ಜಿಯು ರೈತರಿಗೆ, ಸಣ್ಣ ವ್ಯಾಪಾರಿಗಳಿಗೆ, ಮತ್ತು ಸಾಮಾನ್ಯ ಜನರಿಗೆ ತಂತ್ರಜ್ಞಾನದ ಶಕ್ತಿಯನ್ನು ತಂದುಕೊಟ್ಟಿದೆ.

### ಆದ್ರೆ, ಕತೆ ಇಲ್ಲಿ ಮುಗಿಯಲ್ಲ! 6ಜಿ: ಭವಿಷ್ಯದ ಜಾದೂಗಾರ

5ಜಿ ಎಲ್ಲರನ್ನು ತಲುಪಿಲ್ಲ. ಆದರೆ, ಆಗಲೇ 6ಜಿಯ ಕನವರಿಕೆಯಲ್ಲಿ ಜಗತ್ತು ಮಗ್ನವಾಗಿದೆ. ಭಾರತವಂತೂ 6ಜಿ ತಂತ್ರಜ್ಞಾನ ಅಭಿವೃದ್ಧಿ ಯಲ್ಲಿ ಮಂಚೂಣಿಯ ಆರು ರಾಷ್ಟ್ರಗಳಲ್ಲಿ ಒಂದಾಗಿದೆ. ಈ ಹಿಂದೆ ತರಂಗಾಂತರ ಹಂಚಿಕೆಯಲ್ಲಿ ಆದ ಲೋಪದಿಂದ ಮುಗ್ಗರಿಸಿದ ಅನುಭವದಿಂದ ಎಚ್ಚೆತ್ತು ಈಗ ಅಂತಾರಾಷ್ಟ್ರೀಯ ಪೈಪೋಟಿಗೆ ಸಿದ್ಧವಾಗಿದೆ.

6ಜಿಯ ಮಹತ್ವ ಕೇವಲ ವೇಗಕ್ಕೆ ಸೀಮಿತವಾಗಿಲ್ಲ, ಇದು ಭವಿಷ್ಯದ ಜೀವನಶೈಲಿಯನ್ನು ಮರುವ್ಯಾಖ್ಯಾನಿಸುವ ಒಂದು ಡಿಜಿಟಲ್ ಕನಸು. 2030ರ ವೇಳೆಗೆ ವಾಣಿಜ್ಯಕವಾಗಿ ಲಭ್ಯವಾಗುವ ನಿರೀಕ್ಷೆಯಿರುವ 6ಜಿ, 5ಜಿಗಿಂತ ಸುಮಾರು ಸಾವಿರ ಪಟ್ಟು ವೇಗವಾಗಿ ಡೇಟಾವನ್ನು ಸಾಗಿಸಲಿದೆ ಎಂದು ಹೇಳಲಾಗುತ್ತಿದೆ. ಟೆರಾಹರ್ಟ್ಜ್ ಆವರ್ತನಗಳ ಶಕ್ತಿಯನ್ನು ಬಳಸಿಕೊಂಡು, ಇದು ಕ್ಷಣಾರ್ಧದಲ್ಲಿ ಭಾರೀ ಪ್ರಮಾಣದ ಮಾಹಿತಿಯನ್ನು ವಿನಿಮಯ ಮಾಡುವ ಸಾಮರ್ಥ್ಯವನ್ನು ಹೊಂದಿದೆ. 1 ಟೆರಾಬಿಟ್ ವೇಗದಲ್ಲಿ ನಿಮಿಷಕ್ಕೆ 100 ಸಿನಿಮಾಗಳನ್ನು ಡೌನ್‌ಲೋಡ್ ಮಾಡಬಹುದು! ಇದು ಜಗತ್ತನ್ನು ಒಂದು ಸಂಪೂರ್ಣ ಡಿಜಿಟಲ್ ಪರಿಸರ ವ್ಯವಸ್ಥೆಯಾಗಿ ರೂಪಾಂತರಗೊಳಿಸಲಿದೆ. ಅಲ್ಲಿ ಎಲ್ಲವೂ-ನಿಮ್ಮ ಫೋನ್, ಕಾರು, ಗೃಹೋಪಯೋಗಿ ಸಾಧನಗಳು, ಮತ್ತು ಸ್ಮಾರ್ಟ್ ಗ್ರಾಮದ ಡ್ರೋನ್‌ಗಳು-ತಡೆರಹಿತವಾಗಿ ಒಂದಕ್ಕೊಂದು ಮಾತನಾಡುತ್ತವೆ.

6ಜಿ ತಂತ್ರಜ್ಞಾನದಿಂದ ಹೊಲೊಗ್ರಾಫಿಕ್ ಸಂಪರ್ಕ ಸಾಧ್ಯವಾಗಲಿದೆ. ಅಂದರೆ, ದೂರದ ಜನರನ್ನು 3ಡಿ ಚಿತ್ರದಂತೆ ತೋರಿಸುವ ತಂತ್ರಜ್ಞಾನ - ಇದು ವಿಡಿಯೋ ಕಾಲ್‌ಗಿಂತ ಒಂದು ಹೆಜ್ಜೆ ಮುಂದೆ. ಆಗ್ಮೆಂಟೆಡ್ ರಿಯಾಲಿಟಿ (ಎಆರ್), ವರ್ಚುವಲ್ ರಿಯಾಲಿಟಿ (ವಿಆರ್), ಮೆಟಾವರ್ಸ್‌ನಂತಹ ಆವಿಷ್ಕಾರಗಳನ್ನು ಮನೆಮನೆಗೆ ತಲುಪಿಸಲಿದೆ. 6ಜಿಯ ಪ್ರಮುಖ ಕೊಡುಗೆಯೆಂದರೆ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಸಂವಹನ ವ್ಯವಸ್ಥೆ. ಇದು ಮನುಷ್ಯರ ಕನಸುಗಳನ್ನು ಯಂತ್ರಗಳ ಸಾಮರ್ಥ್ಯದೊಂದಿಗೆ ಜೋಡಿಸುವ ಸೇತುವೆ. 6ಜಿಯ ಎಐ-ಚಾಲಿತ ಸಾಧನಗಳು ನಿಮ್ಮ ಅಗತ್ಯಗಳನ್ನು ಮುಂಗಾಣುತ್ತವೆ, ನೀವು ಕೇಳುವ ಮೊದಲೇ ಸೇವೆಗಳನ್ನು ಒದಗಿಸುವಷ್ಟು ಬುದ್ಧಿವಂತವಾಗಿರುತ್ತವೆ.

ಇದು ಕೇವಲ ತಂತ್ರಜ್ಞಾನವಲ್ಲ; ಇದೊಂದು ಸುಂದರ ಡಿಜಿಟಲ್ ಲೋಕ. 6ಜಿಯು ಜನರ ಜೀವನವನ್ನು ರೂಪಾಂತರ ಗೊಳಿಸುವ ಭರವಸೆಯನ್ನು ತಂದಿದೆ. ಬೆಂಗಳೂರಿನ ರಸ್ತೆಗಳಲ್ಲಿ ಡ್ರೈವರ್‌ರಹಿತ ಕಾರುಗಳನ್ನು ಸುರಕ್ಷಿತವಾಗಿ ಓಡಿಸಬಹುದು, ಅಲ್ಲಿನ ಟೆಕ್ ಕಾರಿಡಾರ್‌ನಿಂದ ಬಳ್ಳಾರಿಯ ಕೃಷಿ ಭೂಮಿಗಳವರೆಗೆ, 6ಜಿ ತಂತ್ರಜ್ಞಾನವು ಶಿಕ್ಷಣ, ಕೃಷಿ, ಆರೋಗ್ಯ ಮತ್ತು ವಾಣಿಜ್ಯವನ್ನು ಒಂದು ಡಿಜಿಟಲ್ ಡ್ರೀಮ್ ಲ್ಯಾಂಡ್ ಆಗಿ ಪರಿವರ್ತಿಸಲಿದೆ.

# ತಾಳೆ ಮರ, ತಾಳ್ಮೆ ಇದ್ದರೆ ಅಧಿಕ ಲಾಭ : ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ

**ಹಂಪಿ ಟೈಮ್ಸ್ ಕೊಪ್ಪಳ**
ಬೇಸಿಗೆಯಲ್ಲಿ ಆರೋಗ್ಯಕರ, ಪೌಷ್ಟಿಕ ಖನಿಜಾಂಶಗಳನ್ನು ಹೊಂದಿದ ತಾಳೆ ಹಣ್ಣುಗಳು ಹೆಚ್ಚಿನ ಬೇಡಿಕೆ ಪಡೆದುಕೊಂಡಿವೆ. ಆದಾಯದ ದೃಷ್ಠಿಯಿಂದಲೂ ತಾಳೆ ಹಣ್ಣು ಉತ್ತಮ ವ್ಯಾಪಾರವಾಗಿದ್ದು, ತಾಳೆ ಮರಗಳ ನಾಟಿ, ಬೆಳೆಸುವ ಪದ್ಧತಿ ಕುರಿತು ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ರೈತರಿಗೆ ಮಾಹಿತಿ ನೀಡಿದೆ.

ಈ ವರ್ಷ ಬೇಸಿಗೆ ಆರಂಭ ಆದಾಗಿನಿಂದ ಜಿಲ್ಲೆಯಲ್ಲಿ ತಾಳೆ ಹಣ್ಣುಗಳ ಮಾರಾಟ ಭರಾಟೆಯಿಂದ ಸಾಗಿದೆ. ರಾಯಚೂರು, ಆಂಧ್ರ ಭಾಗದಲ್ಲಿ ಕಾಣಸಿಗುತ್ತಿದ್ದ ಈ ಹಣ್ಣು ಈಗ ಬೆಂಗಳೂರಿನಲ್ಲೂ ತುಂಬ ಬೇಡಿಕೆ ಪಡೆದಿದೆ. ಇಂಗ್ಲೀಷ್‌ನಲ್ಲಿ ಐಸ್‌ಆ್ಯಪಲ್ ಎಂದು ಕರೆಯಲ್ಪಡುವ ಈ ಹಣ್ಣಿನ ವೈಜ್ಞಾನಿಕ ಹೆಸರು ಬೋರಾಸಸ್ ಫ್ಲಾಬೆಲ್ಲಿಫೋರ್. ಇದಲ್ಲದೇ ಅನೇಕ ಪ್ರಭೇದಗಳು ಕಂಡು ಬರುತ್ತವೆ. ಇದೊಂದು ದಕ್ಷಿಣ ಆಫ್ರಿಕಾ ದೇಶದ ಬೆಳೆಯಾಗಿದ್ದು, ಮಲೆನಾಡು ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇತ್ತೀಚಿನ ದಿನಗಳಲ್ಲಿ ಕೊಪ್ಪಳ ಜಿಲ್ಲೆಯಾದ್ಯಂತ ಹೆಚ್ಚಿನ ರೈತರು ಬೆಳೆಯಲು ಆರಂಭಿಸಿದ್ದಾರೆ.

ಹಳದಿ, ಕಂದು ಮತ್ತು ಕಪ್ಪು ಬಣ್ಣ ಹೊಂದಿರುವ ಈ ಹಣ್ಣಿನಲ್ಲಿ 3 ಬೀಜಗಳು (ತಿರುಳು) ಕಂಡು ಬರುತ್ತವೆ. ಈ ತಿರುಳು ಎಳೆಯ ಕೊಬ್ಬರಿಯಂತೆ ತುಂಬಾ ರುಚಿಯಾಗಿರುತ್ತವೆ. ಇದಲ್ಲದೇ ಪೋಷಕಾಂಶಗಳ ದೃಷ್ಟಿಯಿಂದಲೂ ತುಂಬಾ ಪ್ರಯೋಜನಕಾರಿಯಾಗಿದೆ. ಈ ಹಣ್ಣಿನಲ್ಲಿ ಕಬ್ಬಿಣ, ಪೋಟ್ಯಾಶ್ ಮುಂತಾದ ಖನಿಜಾಂಶಗಳಿರುತ್ತವೆ. ಇದು ಕ್ಷಯರೋಗ, ಚರ್ಮವ್ಯಾಧಿ ಮುಂತಾದವುಗಳಿಗೆ ಉತ್ತಮ ಔಷಧಿಯಾಗಿದೆ. ಇದರಿಂದ ತಯಾರಿಸಿದ ಬೆಲ್ಲ ತಮಿಳುನಾಡಿನಲ್ಲಿ ತುಂಬಾ ಬೇಡಿಕೆಯನ್ನು ಹೊಂದಿದೆ. ಈ ಬೆಲ್ಲವನ್ನು ತಾಳೆಗರಿಯಿಂದಲೇ ತಯಾರಿಸಿದ ಪೆಟ್ಟಿಗೆಗಳಲ್ಲಿಟ್ಟು ಮಾರುತ್ತಾರೆ. ಇದರ ಪೂರ್ತಿಗಿಡದ ಎಲ್ಲಾ ಭಾಗಗಳು ಒಂದಿಲ್ಲೊಂದು ಉಪಯೋಗವನ್ನು ಹೊಂದಿದೆ. ಈ ಮರ 3 ಮೀಟರ್ ಸುತ್ತಳತೆ ಹೊಂದಿದ್ದು, ಸುಮಾರು 30 ಮೀಟರ್ ಎತ್ತರದಷ್ಟು ಬೆಳೆಯುತ್ತದೆ. ಒಂದು ಸಾರಿ ಪೂರ್ಣ ಬೆಳೆದ ಮೇಲೆ ನೀರಿನ ಅವಶ್ಯಕತೆ ಇರುವುದಿಲ್ಲ. ವಾತಾವರಣದಲ್ಲಿನ ತೇವಾಂಶವನ್ನೇ ಹೀರಿಕೊಂಡು ಬೆಳೆಯುವ ಈ ಬೆಳೆ ಬದುವಿನಲ್ಲಿ ನಾಟಿ ಮಾಡಲು ಮತ್ತು ಮಣ್ಣುಕೊಚ್ಚಿ ಹೋಗದಂತೆ ಮಾಡಲು ತುಂಬಾ ಪ್ರಯೋಜನಕಾರಿಯಾಗಿದೆ.



ನಾಟಿ ಮಾಡಿದ 15 ವರ್ಷಗಳ ನಂತರ ಹಣ್ಣುಕೊಡಲು ಆರಂಭಿಸುವ ಈ ಮರ 100 ವರ್ಷಗಳವರೆಗೂ ವರ್ಷಕ್ಕೆ ಸುಮಾರು 100 ಕಾಯಿಗಳಷ್ಟು ಫಲ ನೀಡುತ್ತದೆ. ಇಂದು ಮಾರುಕಟ್ಟೆಯಲ್ಲಿ ಪ್ರತಿ ಕಾಯಿ ಬೆಲೆ ರೂ. 20-30 ಗಳು ಇದ್ದು, ರೈತರಿಗೆ ಬೇಸಿಗೆ ಕಾಲದಲ್ಲಿ ಉತ್ತಮ ಆದಾಯ ನೀಡುತ್ತದೆ. ಇದರ ಗರಿಗಳಿಂದ ಬೀಸಣಿಕೆ ಮುಂತಾದ ವಸ್ತುಗಳನ್ನಲ್ಲದೇ ಅಲಂ ಕಾರಿಕ ಸಾಮಗಿ ್ರಗಳನ್ನು ತಯಾರಿಸ ಲಾಗು ತ್ತದೆ. ಇದರಿಂದ ನೀರಾ ಕೂಡ ತೆಗೆದು ಮಾರಾಟ ಮಾಡಬಹುದಾಗಿದೆ.

ನಾಟಿ ವಿಧಾನ : ಈ ಗಿಡವನ್ನು ಬದುವಿನ ಸುತ್ತಲೂ 30 ಮೀಟರ್‌ಗೆ ಒಂದರಂತೆ 2 ಘನ ಅಡಿ ಗುಂಡಿಗಳನ್ನು ಮಾಡಿ ಉತ್ತಮ ಗಿಡಗಳಿಂದ ಆಯ್ದ ಬೀಜವನ್ನು ನಾಟಿ ಮಾಡಬೇಕು. ನಾಟಿ ಮಾಡುವಾಗ ಮರಳು ಮಿಶ್ರಿತ ಕೆಂಪು ಮಣ್ಣಿನ ಜೊತೆಗೆ ಕೊಟ್ಟಿಗೆ ಗೊಬ್ಬರ ಬೆರೆಸಿ ನಾಟಿ ಮಾಡಿದರೆ ಸಾಕು. 45 ದಿನಗಳ ನಂತರ ಮೊಳಕೆ ಒಡೆಯುವ ಈ ಗಿಡವನ್ನು ಒಂದು ವರ್ಷ ಕಾಪಾಡಿದರೆ ಮುಂದಿನ 100 ವರ್ಷಗಳ ಕಾಲ ಬಾಳುತ್ತದೆ. ಇದರಲ್ಲೂ ಕೂಡ ಗಂಡು ಮತ್ತು ಹೆಣ್ಣು ಪ್ರಭೇಧಗಳಿದ್ದು, ನೈಸರ್ಗಿಕವಾಗಿ ಮತ್ತು ಕೀಟಗಳಿಂದ ಪರಾಗಸ್ಪರ್ಶ ಹೊಂದುತ್ತದೆ. ಮಳೆಯ ಅಭಾವ ಮತ್ತು ಮಣ್ಣಿನ ಫಲವತ್ತತೆ ಹಾಳಾಗಿರುವ ಪ್ರದೇಶದಲ್ಲಿ ಇದೊಂದು ಉತ್ತಮ ಬೆಳೆಯಾಗಿದ್ದು, ರೈತರ ಆದಾಯ ಹೆಚ್ಚಿಸಲು ಸಹಕಾರಿಯಾಗಿದೆ.

**ಸಂಶೋಧನೆ :** ಶ್ರೀಲಂಕಾ ದೇಶದ ಜಾಫ್ನಾದಲ್ಲಿ ಪಾಣೀರಾ ಡೆವಲಪ್‌ಮೆಂಟ್ ಬೋರ್ಡ್ ಸಂಸ್ಥೆಯಲ್ಲಿ ತಾಳೆ ಬೆಳೆಯ ಕುರಿತು ಹೆಚ್ಚಿನ ಸಂಶೋಧನೆ ನಡೆಸಲಾಗುತ್ತಿದೆ. ಇದಲ್ಲದೇ ತಮಿಳು ನಾಡಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಹೆಚ್ಚಿನ ಸಂಶೋಧನೆ ಕೈಗೊಳ್ಳಲಾಗುತ್ತಿದೆ.

ತಾಳೆ ಬೆಳೆ ಕೃಷಿಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕೊಪ್ಪಳದ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಜ್ಞಾನಿಗಳನ್ನು, ವಿಸ್ತರಣಾ ಮುಂದಾಳು ಡಾ. ಎಂ.ಎ.ರವಿ. ಮೊ.ನಂ. 9480247745 ಮತ್ತು ಸಹಾಯಕ ಪ್ರಾಧ್ಯಾಪಕರಾದ ವಾಮನಮೂರ್ತಿ ಮೊ.ನಂ. 8217696837 ಇವರನ್ನು ಸಂಪರ್ಕಿಸಬಹುದು ಎಂದು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಪ್ರಕಟಣೆ ತಿಳಿಸಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಸಿಂಧೂರ

ಬೆಳಗಲಿ ಹಣೆಯ ಸಿಂಧೂರ
ಹೆಣ್ಣಿನ ಬಾಳಿನ ಆಧಾರ
ನಗುವಿರೇ ಬಾಳು ಬಂಗಾರ
ಹಸನಾಗಲಿ ಆಕೆಯ ಸಂಸಾರ

ಸಿಂಧೂರಕೆ ಇಹುದು ಶ್ರೀರಕ್ಷೆ
ಅಳಿಸಿದರೆ ಕಾದಿದೆ ಭೀಕರ ಶಿಕ್ಷೆ
ನೀಡಿಹೆವು ಕದನವಿರಾಮದ ಭಿಕ್ಷೆ
ಬದಲಿಸಬಲ್ಲೆವು ದೇಶದ ನಕ್ಷೆ

ಒರೆಸುವ ಸೋದರಿಯರ ಕಂಬನಿ
ಹರಡಲಿ ತ್ಯಾಗದ ಮಾರ್ದನಿ
ಉರಿಯುತಿರಲಿ ದೇಶಭಕ್ತಿಯ ಧುನಿ
ಉಗ್ರರ ವಿನಾಶಕೆ ಮೊಳಗಲಿ ಧ್ವನಿ

**– ಚೇತನ ಭಾರ್ಗವ, ಬೆಂಗಳೂರು**

### ಮೊಸರಿನಲ್ಲಿ ಕಲ್ಲು?...

ಆಕ್ರಮಣ ಸಿಂಧೂರ
ಗಳಿಸಿರುವ ಯಶವೆಷ್ಟು
ವಿವರವನು ನಮಗೀಗ ಅರಿಯ ಬೇಕೆ
ದೂರದರ್ಶನ ಇರಲಿ
ವಾರ್ತೆ ಪತ್ರಿಕೆ ಇರಲಿ
ಅದಕಾಗಿ ಇವುಗಳನು ನೋಡಲೇಕೆ

ಉರಿ ಹತ್ತಿ ವಿಪಕ್ಷಗಳು
ಆಡುತಿಹ ನುಡಿಮುತ್ತು
ಕಿರುಚಾಟ ನೋಡಿದರೆ ಅಷ್ಟು ಸಾಕು
ಮೊಸರನ್ನು ಕದಡುತ್ತ
ಕಲ್ಲನ್ನು ಅರಸುವರು
ದೊರೆತ ಮೊಸರನು ಕಲ್ಲು ಎಂಬರಲ್ಲ

ಹುಳವನರಸುವ ಕೋಳಿ
ಬಗೆದು ಮಣ್ಣನು ಕೆದಕಿ
ಹುಳವ ಹುಡುಕುವುದಲ್ಲಿ ನಿತ್ಯ ಕಾರ್ಯ
ಅರಸಿ ಯತ್ನವ ಮಾಡಿ
ಅಲ್ಲಿ ಆದುದು ರಾಡಿ
ಉದರದಡಿಗದ ಎಳೆವ ಅರಿತ ವಿಷಯ

ಪಕ್ಷ ಬೇಧವ ಮರೆತು
ದೇಶದೊಂದಿಗೆ ನಿಲದೆ
ಸ್ವಾರ್ಥಪರರಾಗಿಹರೆ ಲಜ್ಜೆಗೇಡು
ನಿಮ್ಮ ದ್ವೇಷವು ಇರಲಿ
ಮತದಾನವದು ಬರಲಿ
ಈಗ ಈ ಪರಿಯು ಕುಹಕಕೇಡು॥

**– ಪೆರ್ಮುಖ ಸುಬ್ರಹ್ಮಣ್ಯ ಭಟ್**

### ರಣ ಹೇಡಿಗಳು

ಇವರು ರಣ ಹೇಡಿಗಳು
ಇವರಿಗಿಲ್ಲ ಹೃದಯ ಕರುಳು
ಅಮಾಯಕರ ಕೊಂದವರು
ಹೆಂಗಳೆಯರ ಸಿಂಧೂರ ತೆಗೆದವರು।

ಇವರು ರಣ ಹೇಡಿಗಳು
ಪರರಿಗೆ ಕೇಡು ಬಗೆದವರು
ಉಗ್ರರಿಗೆ ಆಶ್ರಯ ನೀಡಿದವರು
ಮಾನವ ಕುಲಕ್ಕೆ ಉರುಳಾದವರು।

ಇವರು ರಣ ಹೇಡಿಗಳು
ಸ್ವದೇಶಿ ಗಾಳಿ ಅನ್ನ ನೀರು ಬೇಕು
ಅನ್ಯ ದೇಶ ಹೊಗಳುವ ದುರುಳರು
ಇವರನ್ನು ನಾಗರಿಕರು ತಿರಸ್ಕರಿಸಬೇಕು।

ಇವರು ರಣ ಹೇಡಿಗಳು
ಯುದ್ಧ ವಿರಾಮ ಘೋಷಿಸೆಂದರು
ಮರುಕ್ಷಣ ಉಲ್ಲಂಘಿಸಿದ ಘಾತುಕರು
ಕೊಡಬಾರದು ಇವರಿಗೆ ಅನ್ನ ನೀರು।

ಇವರು ರಣ ಹೇಡಿಗಳು
ಯುದ್ಧ ಬೇಡವೆಂದು ಟೀಕಿಸಿದರು
ವೈರಿಗಳ ಪರ ನಿಂತರು ಕೆಲವರು
ನುಗ್ಗಿ ವೈರಿಗಳ ಗುಮ್ಮಿದಾಗ ಜೈ ಅಂದರು।

ನಿನ್ನ ನಾಡಿನೊಳು ಹೇಗಾದರೂ ಇರು
ನೀ ನಿಂತ ಭೂಮಿಗೆ ಅವಮಾನ
ಮಾಡದಿರು
ಒಮ್ಮತದ ಮಾತು ನಮ್ಮೆಲ್ಲರಲಿ ಬರಲಿ
ರಣ ಹೇಡಿಯಂತೆ ಭಾರತ ದೇಶದೊಳು
ಬಾಳದಿರು.

**– ಚಂದ್ರಶೇಖರಯ್ಯ ರೋಣದಮಠ**

For Ads
Contact:
94486 33038

# ಭೂಮಿಯ ತಿರುಳು ತಣ್ಣಗಾದರೆ...




ಹವಾಮಾನ ವೈಪರೀತ್ಯ ಮತ್ತು ಭೂತಾಪಮಾನ ಏರಿಕೆಯ ಕುರಿತು ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಬಜಿ ವರದಿಯನ್ನು ಓದುತ್ತಿದ್ದ ತಂದೆ ಒಮ್ಮೆಲೆ ನಿಟ್ಟುಸಿರು ಬಿಟ್ಟರು. ಪಕ್ಕದಲ್ಲೇ ಕುಳಿತು ಹೋಂವರ್ಕ್ ಮಾಡುತ್ತಿದ್ದ ರಾಜೇಶ್ "ಏನಾಯ್ತಪ್ಪ,,,,!" ಎಂದ. 'ಏನಿಲ್ಲಪ್ಪ, ಪ್ರತಿವರ್ಷವೂ ಭೂತಾಪಮಾನ ಏರುತ್ತಲೇ ಇದೆ. ಇದು ಹೀಗೇ ಮುಂದುವರೆದರೆ ಭವಿಷ್ಯ ಹೇಗೆ ಎಂಬುದೇ ಚಿಂತೆಯಾಗಿದೆ' ಎಂದರು ತಂದೆ. "ಭೂ ತಾಪಮಾನ ಏರಿಕೆಯಿಂದ ಏನಾಗುತ್ತೆ ಅಪ್ಪಾ,,,?" ಎಂದು ತಟ್ಟನೆ ಪ್ರಶ್ನೆ ಹಾಕಿದ. 'ಭೂ ತಾಪಮಾನ ಏರಿಕೆಯಿಂದ ವಾತಾವರಣ ದಲ್ಲಿ ತಾಪಮಾನ ಹೆಚ್ಚಳವಾಗುತ್ತದೆ. ಇದರಿಂದ ಜೀವಿಗಳ ಬದುಕು ತೊಂದರೆಗೆ ಒಳಗಾಗುತ್ತದೆ' ಎಂದು ಸಂಕ್ಷಿಪ್ತವಾಗಿ ವಿವರಿಸಿದರು. "ಭೂಮಿಯ ತಾಪಮಾನ ಅಂದ್ರೆ ಭೂಮಿಯೊಳಗಿನ ತಾಪ ಅಲ್ವೇನಪ್ಪಾ?" ಎಂದಳು ಪಕ್ಕದಲ್ಲಿದ್ದ ಕೀರ್ತಿ. ತಂದೆ ಹೌದೆಂದು ತಲೆಯಾಡಿಸಿ ಮಾತು ಪ್ರಾರಂಭಿಸಿದರು. 'ಭೂಮಿಯೊಳಗೆ ಶಿಲಾರಸ ತಾಪಮಾನದಿಂದ ಯಾವಾಗಲೂ ಕುದಿಯುತ್ತಲೇ ಇರುತ್ತದೆ. ಹಾಗಾಗಿ ಭೂಮಿಯ ತಾಪಮಾನ ಹೆಚ್ಚುತ್ತಲೇ ಇರುತ್ತದೆ' ಎಂದರು. "ಅಪ್ಪಾಜಿ ಭೂಮಿಯೊಳಗಿನ ತಾಪಮಾನ ಕಡಿಮೆಯಾದರೆ ಈ ತೊಂದರೆ ಇರುವುದಿಲ್ಲ ಅಲ್ಲವೇ?" ಎಂದಳು ಕೀರ್ತಿ. 'ಇಲ್ಲಮ್ಮ ಭೂಮಿಯ ಕೋರ್ ಅಂದರೆ ತಿರುಳು ತಂಪಾದರೆ ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ' ಎಂದರು ತಂದೆ.

ತಂದೆಯ ಉತ್ತರಕ್ಕೆ ಸುಮ್ಮನಾಗದ ಕೀರ್ತಿ ಮತ್ತು ರಾಜೇಶರು "ಭೂಮಿಯ ಕೋರ್ ತಣ್ಣಗಾದರೆ ಏನಾಗುತ್ತದೆ ಹೇಳಪ್ಪಾ?" ಎಂದು ತಂದೆಯನ್ನು ಕಾಡತೊಡಗಿದರು. 'ಈ ಬಗ್ಗೆ ನನಗೆ ಅಷ್ಟೊಂದು ತಿಳಿಯದು. ಅಲ್ಲಿ ನಿಮ್ಮ ಮಾಮನ ಬಳಿ ಹೋಗಿ ಕೇಳಿ. ಅವರು ಹೇಳುತ್ತಾರೆ' ಎಂದು ಇಬ್ಬರನ್ನೂ ಸಾಗಹಾಕಿದರು. ಇಬ್ಬರೂ ಮಾಮನ ಬಳಿ ಬಂದು ಅದೇ ಪ್ರಶ್ನೆ ಕೇಳಿದರು. ಮಾಮನ ಉತ್ತರ ಮುಂದಿನಂತಿದೆ.

ಕೋರ್ ಎನ್ನುವುದು ಭೂಮಿಯ ಒಳಗಿನ ಭಾಗವಾಗಿದೆ. ಭೂಮಿಯ ಕೋರ್‌ನ ಬಗ್ಗೆ ತಿಳಿಯುವ ಮೊದಲು ಭೂರಚನೆಯ ಬಗ್ಗೆ ಸಂಕ್ಷಿಪ್ತವಾಗಿ ತಿಳಿಯುವುದು ಅಗತ್ಯ. ಭೂಮಿಯನ್ನು ಒಂದು ಮೊಟ್ಟೆಗೆ ಹೋಲಿಸಬಹುದು. ಮೊಟ್ಟೆಯ ಮೇಲೆ ಗಟ್ಟಿಯಾದ ಕವಚ ಇರುವಂತೆ ಭೂಮಿಗೂ ಹೊರಚಿಪ್ಪು ಇದೆ. ಇದರಲ್ಲಿ ಗುಡ್ಡ ಬೆಟ್ಟ, ನದಿ, ಸಾಗರ, ಸಮುದ್ರಗಳಿವೆ. ಇದನ್ನು ಶಿಲಾಗೋಳ ಎನ್ನುವರು. ಇದರ ಕೆಳಗಿನ ಭಾಗವೇ ಮ್ಯಾಂಟಲ್. ಇದು ಮೊಟ್ಟೆಯ ಲೋಳೆಯಂತೆ, ಯಾವಾಗಲೂ ಶಿಲಾರಸ ಕುದಿಯುತ್ತಲೇ ಇರುತ್ತದೆ. ಇಲ್ಲಿನ ಉಷ್ಣತೆ 20000 ಸೆಲ್ಸಿಯಸ್‌ಗೂ ಮಿಗಿಲು. ಮ್ಯಾಂಟಲ್‌ನ ಕೆಳಭಾಗವೇ ತಿರುಳು ಅಥವಾ ಕೋರ್. ಮೊಟ್ಟೆಗೆ ಹಳದಿ ಭಾಗ ಇರುವಂತೆ ಭೂಮಿಗೆ ತಿರುಳು. ಸೂರ್ಯನ ಮೇಲ್ಮೈನಂತೆ ಭೂಮಿಯ ತಿರುಳೂ ಸಹ ಅತ್ಯಂತ ಸ್ವಾರಸ್ಯಕರವಾದುದು.

ಭೂಮಿಯು ರೂಪುಗೊಂಡ ವೇಳೆ ಕೋರ್ ಸಹ ರೂಪುಗೊಳ್ಳುತ್ತಾ ಬಂದಿದೆ. ಇದು ಭೂ ಮೇಲ್ಮೈಯಿಂದ ಸುಮಾರು 6370 ಕಿ.ಮೀ ಆಳದಲ್ಲಿದೆ. ಇಲ್ಲಿನ ಉಷ್ಣತೆ 45000–60000 ಸೆಲ್ಸಿಯಸ್. ಭೂಮಿಗೆ ಕಾಂತಶಕ್ತಿಯನ್ನು ನೀಡಿರುವುದು ಈ ಭಾಗವೇ. ಇಲ್ಲಿ ನಿಕ್ಕಲ್ ಮತ್ತು ಕಬ್ಬಿಣದ ಸಂಯೋಜನೆಯಿಂದ ಕೂಡಿದ ರಸಾಯನಿ ಕಗಳಿವೆ. ಇದನ್ನು 'ನಿಫೆ'(ನಿ–ನಿಕ್ಕಲ್, ಫೆ–ಫೆರಸ್) ಎಂದು ಕರೆಯಲಾಗುತ್ತದೆ. ಗುರುತ್ವಾಕರ್ಷಣೆಯಿಂದ ಕಬ್ಬಿಣ ಮತ್ತು ನಿಕ್ಕಲ್‌ನಂತಹ ಭಾರವಾದ ಲೋಹಗಳು ಕೇಂದ್ರದ ಮಧ್ಯದಲ್ಲಿ ಜಮಾವಣೆಗೊಂಡವು. ಗಾಳಿ ಮತ್ತು ನೀರಿನಂತಹ ಹಗುರ ಪದಾರ್ಥಗಳು ಹೊರಪದರಕ್ಕೆ ಏರಿದವು. ಭೂಮಿಯ ತಿರುಳಿನ ಗುರುತ್ವಾಕರ್ಷಣೆಯು ಹೊರಗಿನ ಮೇಲ್ಮೈ ಗುರುತ್ವಾಕರ್ಷಣೆಗಿಂತ ಮೂರು ಪಟ್ಟು ಹೆಚ್ಚಾಗಿದೆ. ಗುರುತ್ವಾಕರ್ಷಣೆಯಿಂದ ಭಾರ ಲೋಹಗಳು ಕೇಂದ್ರವನ್ನು ಸೇರುತ್ತಲೇ ಇರುತ್ತವೆ. ಇದರಿಂದ ಭೂಮಿಯ ತಿರುಳು ಅಂದರೆ ಕೋರ್ ಪ್ರತಿ ಸಾವಿರ ವರ್ಷಗಳಿಗೆ ಸುಮಾರು ಒಂದು ಸೆಂ.ಮೀ ಬೆಳೆಯುತ್ತಲೇ ಇದೆ. ಭೂಮಿಯ ತಿರುಳಿನ ಗಾತ್ರ ಹೆಚ್ಚಿದಂತೆಲ್ಲಾ ಶಾಖದ ಪ್ರಮಾಣ ಹೆಚ್ಚುತ್ತಲೇ ಇರುತ್ತದೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ಬಿಸಿಯಾದ ತಿರುಳು ಭೂಮಿಯ ಮೇಲೆ ಜೀವಿಗಳು ಬದುಕು ಅಗತ್ಯವಾದ ಹಲವಾರು ಕಾರ್ಯ ಗಳನ್ನು ನಿರ್ವಹಿಸುತ್ತದೆ. ಒಂದು ವೇಳೆ ತಿರುಳು ತಣ್ಣಗಾದರೆ ಭೂಮಿಯ ಮೇಲಿನ ಪ್ರಮುಖ ಕಾರ್ಯಗಳನ್ನು ಅಡ್ಡಿಪಡಿಸುತ್ತದೆ. ಖಂಡಿತವಾಗಿಯೂ ನಾವು ಅದನ್ನು ಬಯಸದಿರುವುದೇ ಒಳಿತು. ಆದರೆ ಕುತೂಹಲಕ್ಕಾಗಿ ಯಾದರೂ ಈ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ.

ತಂಪಾದ ತಿರುಳು ಎಂದರೆ ತಂಪಾದ ಅಥವಾ ಸತ್ತ ಗ್ರಹ ಎಂದೇ ಹೇಳಬಹುದು. ಕೋರ್ ತಣ್ಣಗಾದರೆ ಭೂಮಿಯೂ ತಣ್ಣಗಾದಂತೆ. ಇದು ಭೂಮಿಯ ಅವಸಾನದ ಸ್ಥಿತಿ ಎಂದು ಭೂವಿಜ್ಞಾನಿಗಳು ಹೇಳುತ್ತಾರೆ. ಭೂಮಿಯ ಅಂತರಾಳದ ಉಷ್ಣವು ಹಬೆಯನ್ನು ಉತ್ಪತ್ತಿ ಮಾಡುತ್ತದೆ. ಈ ಹಬೆಯು ಅಂತರ್ಗತ ಶಕ್ತಿಯಾದ ವಿದ್ಯುತ್ ಉತ್ಪಾದಿಸುತ್ತದೆ. ಇದರಿಂದ ಭೂಕಾಂತ ಕ್ಷೇತ್ರವು ರೂಪಗೊಂಡಿದೆ. ಕೋರ್ ತಣ್ಣಗಾದರೆ ಆಂತರಿಕ ವಿದ್ಯುತ್ ಉತ್ಪತ್ತಿ ನಿಲ್ಲುತ್ತದೆ ಹಾಗೂ ಭೂಕಾಂತ ಕ್ಷೇತ್ರವು ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಸೈನಿಕರಿಗೆ ಗುರಾಣಿ ಇದ್ದಂತೆ ಭೂಮಿಗೆ ಭೂಕಾಂತ ಕ್ಷೇತ್ರ. ಇದು ಸೂರ್ಯನಿಂದ ಬರುವ ಹಾನಿಕಾರಕ ಕಾಸ್ಮಿಕ್ ಹಾಗೂ ಸೌರ ವಿಕಿರಣದಿಂದ ಭೂಮಿಯನ್ನು ರಕ್ಷಿಸುತ್ತದೆ. ಭೂಕಾಂತದ ಗುರಾಣಿ ಇಲ್ಲವಾದರೆ ಭೂಗ್ರಹವು ಹೆಚ್ಚು ಬಿಸಿಯಾಗುತ್ತದೆ. ಇದು ಮುಂದುವರೆದರೆ ಭೂಮಿಯ ಮೇಲಿನ ನೀರು ಸೌರ ಉಷ್ಣದಿಂದ ಆವಿಯಾಗಿ ಇಡೀ ಭೂಗ್ರಹ ಮಂಗಳ ಮತ್ತು ಶುಕ್ರಗ್ರಹಗಳಂತೆ ಒಣಗ್ರಹವಾಗಬಹುದು. ಭೂಮಿಯು ಒಣಗ್ರಹವಾದರೆ ಉಸಿರಾಡಲು ಆಮ್ಲಜನಕ ಇಲ್ಲದಂತಾಗುತ್ತದೆ. ಅದಕ್ಕಾಗಿ ಕೃತಕ ಉಸಿರಾಟ ವ್ಯವಸ್ಥೆಯನ್ನು ಅಳವಡಿಸಿಕೊಳ್ಳ ಬೇಕಾಗಬಹುದು ಎಂದು ಹೇಳಿ ಮಾಮ ಧೀರ್ಘ ಉಸಿರನ್ನು ಒಳಗೆಳೆದುಕೊಂಡರು.

ಇದುವರೆಗೂ ಉಸಿರನ್ನು ಅಂಗೈಯಲ್ಲಿ ಹಿಡಿದುಕೊಂಡಂತೆ ವಿಷಯವನ್ನು ಕೇಳುತ್ತಾ ಕುಳಿತಿದ್ದ ರಾಜೇಶ ಮತ್ತು ಕೀರ್ತಿಯೂ ಸಹ ಧೀರ್ಘ ಉಸಿರನ್ನು ಒಳಗೆಳೆದುಕೊಂಡು. ಆದರೂ ರಾಜು ತನ್ನ ಮನದಲ್ಲಿ ಮೂಡಿದ್ದ ಮತ್ತೊಂದು ಪ್ರಶ್ನೆಯನ್ನು ಕೇಳಿದ. "ಮಾಮ ಭೂಮಿಯ ಕೋರ್ ತಣ್ಣಗಾದರೆ ಜ್ವಾಲಾಮುಖಿಗಳು ಉಂಟಾಗುವುದಿಲ್ಲ ಅಲ್ವಾ" ಎಂದನು.

'ಹೌದು ಸರಿಯಾಗಿ ಊಹಿಸಿದ್ದೀಯಾ. ತಿರುಳು ತಣ್ಣಗಾದರೆ ಮಂಜುಗಡ್ಡೆಯಂತೆ ಹೆಪ್ಪುಗಟ್ಟುತ್ತದೆ. ಆಗ ಜ್ವಾಲಾಮುಖಿಗಳು ಸಂಭವಿಸುವುದಿಲ್ಲ. ಭೂಮಿಯ ಟೆಕ್ಟೋನಿಕ್ ಪ್ಲೇಟ್‌ಗಳು ಪರಸ್ಪರ ಡಿಕ್ಕಿಹೊಡೆಯುವುದಿಲ್ಲ ಮತ್ತು ದೂರ ಸರಿಯುವುದಿಲ್ಲ. ಇದರಿಂದ ಸುನಾಮಿಗಳಾಗಲೀ, ಭೂಕಂಪಗಳಾಗಲೀ ಸಂಭವಿಸುವುದಿಲ್ಲ' ಎಂದರು ಮಾಮ.

ಆಗ ಬಾಣದಷ್ಟೇ ವೇಗವಾಗಿ ಕೀರ್ತಿಯಿಂದ ಮತ್ತೊಂದು ಪ್ರಶ್ನೆ ಬಂದಿತು. "ಮಾಮ ಭೂಮಿಗೆ ರಂಧ್ರ ಕೊರೆದು ಕೋರನ್ನು ತಲುಪಬಹುದೇ". ಕೋರ್ ತಣ್ಣಗಾದರೆ ಏನಾಗುತ್ತೆ ಎಂದು ಹೇಳಿ ಸುಸ್ತಾಗಿದ್ದ ಮಾಮ 'ಇನ್ನೊಂದು ದಿನ ಈ ಬಗ್ಗೆ ಹೇಳುವೆ' ಎಂದು ಹೇಳುತ್ತಾ ಹೊರನಡೆದರು.

# ದೂರದೆಲ್ಲವನ್ನೂ ಹತ್ತಿರಗೊಳಿಸಿದ ದೂರಸಂಪರ್ಕ ಡಿಜಿಟಲ್ ರೂಪಾಂತರದಲ್ಲಿ ಲಿಂಗ ಸಮಾನತೆ

ಆಧುನಿಕ ಜೀವನದಲ್ಲಿ ದೂರಸಂಪರ್ಕವು ಪ್ರಮುಖ ಪಾತ್ರವನ್ನು ನಿಭಾಯಿಸುತ್ತಿದೆ. ಅದು ಕೇವಲ ಸಂವಹನಕ್ಕೆ ಮಾತ್ರ ಸೀಮಿತವಾಗಿರದೇ, ವ್ಯವಹಾರ, ಶಿಕ್ಷಣ ಮತ್ತು ಮಾಹಿತಿಯ ಪ್ರವೇಶ, ಆರೋಗ್ಯ ರಕ್ಷಣೆ, ಮನರಂಜನೆಯಂತಹ ಹಲವಾರು ವಲಯಗಳನ್ನು ಪ್ರಭಾವಿಸಿದೆ. ನಿತ್ಯ ಜೀವನದಲ್ಲಿ ದೂರಸಂಪರ್ಕದ ಮಹತ್ವ ಮತ್ತು ಅದರಿಂದಾಗುತ್ತಿರುವ ಹಲವಾರು ಪ್ರಯೋಜನಗಳನ್ನು ತಿಳಿಸುವುದರ ಜೊತೆಗೆ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ ಅಭಿವೃದ್ಧಿಯನ್ನು ಉತ್ತೇಜಿಸುವುದು, ದೂರ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಆಗುತ್ತಿರುವ ಬೆಳವಣಿಗೆಗಳು, ಡಿಜಿಟಲ್ ತಾರತಮ್ಯವನ್ನು ನಿಯಂತ್ರಿಸುವ ಉದ್ದೇಶ ದಿಂದ, ಡಿಜಿಟಲೀಕರಣವು ಮಾನವನ ಜೀವನವನ್ನು ಹೇಗೆ ಪ್ರಭಾವಿಸಿದೆ? ಎಂಬಿತ್ಯಾದಿ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಪ್ರತಿ ವರ್ಷ ಮೇ–17ರಂದು ವಿಶ್ವ ದೂಸಂಪರ್ಕ ದಿನವನ್ನಾಗಿ ಆಚರಿಸಲಾಗುತ್ತದೆ. 1865ರ ಮೇ–17ರಂದು ಅಂತಾರಾಷ್ಟ್ರೀಯ ಟೆಲಿಗ್ರಾಫ್ ಒಕ್ಕೂಟ (ಐಟಿಯು) ಸ್ಥಾಪನೆಯಾದ ನೆನಪಿನಲ್ಲಿ ಈ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ. 1876ರ ದೂರವಾಣಿ ಆವಿಷ್ಕಾರ, 1957ರ ಚೊಚ್ಚಲ ಉಪಗ್ರಹ ಉಡಾವಣೆ ಈ ಎರಡು ಅವಿಸ್ಮರಣೀಯ ಘಟನೆಗಳ ನಂತರ 60ರ ದಶಕದ ಅಂತರ್ಜಾಲದ ಆವಿಷ್ಕಾರದ ಕಾಲಘಟ್ಟದಲ್ಲಿ ಈ ಅಂತಾರಾಷ್ಟ್ರೀಯ ಟೆಲಿಗ್ರಾಫ್ ಒಕ್ಕೂಟವು ನಿರ್ಣಾಯಕ ಪಾತ್ರ ವಹಿಸಿತ್ತು. ಟುನಿಸ್ ದೇಶದಲ್ಲಿ 2005ರಲ್ಲಿ ವಿಶ್ವ ಮಾಹಿತಿ ಸೊಸೈಟಿಯ ಸಮಾವೇಶ ನಡೆದಿತ್ತು. ಸಂಪರ್ಕ ಕ್ಷೇತ್ರದಲ್ಲಿ ಆಗುತ್ತಿದ್ದ ತ್ವರಿತ ಬೆಳವಣಿಗೆಗಳನ್ನು ಗಮನಿಸಿ ಪ್ರತಿವರ್ಷ ಮೇ–17ರಂದು ವಿಶ್ವ ದೂರಸಂಪರ್ಕ ಮತ್ತು ಮಾಹಿತಿ ಸೊಸೈಟಿಯ ದಿನವನ್ನಾಗಿ ಆಚರಿಸಬೇಕೆಂದು ವಿಶ್ವಸಂಸ್ಥೆಗೆ ಕರೆ ನೀಡಿತ್ತು. ಈ ಸಮಾವೇಶದ ಆಶಯದಂತೆ 2006 ಮಾರ್ಚ್‌ನಲ್ಲಿ ವಿಶ್ವಸಂಸ್ಥೆ ತನ್ನ ಸಾಮಾನ್ಯ ಸಭೆಯಲ್ಲಿ ಪ್ರತಿ ವರ್ಷ ಮೇ–17ರಂದು ವಿಶ್ವ ದೂರಸಂಪರ್ಕ ಮತ್ತು ಮಾಹಿತಿ ಸೊಸೈಟಿಯ ದಿನವನ್ನು ಆಚರಿಸುವ ನಿರ್ಣಯವನ್ನು ಘೋಷಿಸಿತು. ಪ್ರತಿ ವರ್ಷ ಒಂದು ನಿರ್ದಿಷ್ಟ ಥೀಮ್ ನೊಂದಿಗೆ ಆಚರಿಸಲಾಗುವ ಈ ದಿನವನ್ನು ಈ ವರ್ಷ 'ಡಿಜಿಟಲ್ ರೂಪಾಂತರದಲ್ಲಿ ಲಿಂಗ ಸಮಾನತೆ' ಎಂಬ ಥೀಮ್ ನೊಂದಿಗೆ ಆಚರಿಸಲಾಗುತ್ತಿದೆ. ಡಿಜಿಟಲ್ ಜಗತ್ತಿನಲ್ಲಿ ಮಹಿಳೆಯರ ಸಾಮರ್ಥ್ಯವನ್ನು ಮಿತಿಗೊಳಿಸುತ್ತಿರುವ ಅಂಶಗಳತ್ತ ಜಾಗತಿಕ ಗಮನವನ್ನು ಈ ಥೀಮ್ ಸೆಳೆಯುತ್ತದೆ. ತಂತ್ರಜ್ಞಾನ ವಲಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ನಿರಂತರವಾಗಿ ಹೆಚ್ಚಿಸುವುದರ ಜೊತೆಗೆ ಡಿಜಿಟಲ್ ಸಾಕ್ಷರತೆಗೆ ಹೆಚ್ಚು ಒತ್ತು ನೀಡುವ ಅಂಶಗಳನ್ನೂ ಸಹ ಒಳಗೊಂಡಿದೆ.



ರಾಜು. ಭೂಶೆಟ್ಟಿ
ಲೇಖಕರು, ಹುಬ್ಬಳ್ಳಿ

Scan For Digital Colourful
HAMPI TIMES E-paper

ಇಂದು ವಿಶ್ವದ ಯಾವುದೇ ಮೂಲೆಯಲ್ಲಿರುವ ವ್ಯಕ್ತಿಯ ಜೊತೆಗೆ ಸಂವಹನ ಅಥವಾ ವ್ಯವಹಾರಗಳು ಎಲ್ಲವನ್ನೂ ಸಾಧ್ಯವಾಗಿಸಿರುವುದು ಇದೇ ದೂರಸಂಪರ್ಕದಲ್ಲಿನ ವ್ಯಾಪಕವಾದ ಕ್ರಾಂತಿಯಿಂದ ಎಂದು ಹೇಳಬಹುದು. ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸಿಕೊಂಡು ದೂರದವರೆಗೆ ಮಾಹಿತಿಯನ್ನು ಪ್ರಸರಣ ಮಾಡುವುದನ್ನೇ ದೂರಸಂಪರ್ಕ ಎಂದು ಕರೆಯುವರು. ಇದರಲ್ಲಿ ದೂರವಾಣಿ ಮಾರ್ಗಗಳು, ಕೇಬಲ್‌ಗಳು, ರೇಡಿಯೋ ತರಂಗಗಳು ಮತ್ತು ಉಪಗ್ರಹಗಳಂತಹ ವಿವಿಧ ತಂತ್ರಜ್ಞಾನಗಳು ಸೇರಿವೆ ಎಂದು ಹೇಳಬಹುದು. ಮೂಲಭೂತವಾಗಿ ಇದು ಧ್ವನಿ, ದತ್ತಾಂಶ, ಚಿತ್ರಗಳು, ವಿಡಿಯೋ ಮೂಲಕ ದೂರದವರೆಗೂ ಸಂವಹನ ನಡೆಸುವುದಾಗಿದೆ. ದೂರಸಂಪರ್ಕದ ಸಾಮಾನ್ಯ ಕೆಲವು ಉದಾಹರಣೆಗಳನ್ನು ನೋಡುವುದಾದರೆ ಫೋನ್ ಕರೆಗಳು, ಇ–ಮೇಲ್, ಇಂಟರ್ನೆಟ್ ಸಂವಹನ, ದೂರದರ್ಶನ ಪ್ರಸಾರ ಮುಂತಾದವು.


ದೂರಸಂಪರ್ಕವು ಭೌಗೋಳಿಕ ಅಂತರವನ್ನು ಲೆಕ್ಕಿಸದೆ ವಿಡಿಯೋ ಕಾನ್ಫರೆನ್ಸಿಂಗ್, ಇ–ಮೇಲ್ ಮತ್ತು ಸಾಮಾಜಿಕ ಮಾಧ್ಯಮಗಳಂತಹ ಸಾಧನಗಳ ಮೂಲಕ ವಿಶ್ವದಾದ್ಯಂತ ಜನರೊಂದಿಗೆ ಸಂಪರ್ಕ ಸಾಧಿಸುವುದು ಸಾಧ್ಯವಾಗಿಸಿದೆ. ಮೊಬೈಲ್ ಫೋನ್‌ಗಳು, ಇಂಟರ್ನೆಟ್ ಮತ್ತು ವಿವಿಧ ಮೆಸೇಜಿಂಗ್ ಅಪ್ಲಿಕೇಶನ್‌ಗಳು ದೂರದಿಂದ ಬೇರ್ಪಟ್ಟಿದ್ದರೂ ಸಹ ನಮ್ಮ ಪ್ರೀತಿಪಾತ್ರರಿಗೆ, ಸ್ನೇಹಿತರಿಗೆ ಮತ್ತು ಸಹೋದ್ಯೋಗಿಗಳೊಂದಿಗೆ ಸಂಪರ್ಕ ದಲ್ಲಿರಲು ಅವಕಾಶ ಮಾಡಿಕೊಟ್ಟಿದೆ. ದೂರಸಂಪರ್ಕವು ತ್ವರಿತ ಸಂವಹನವನ್ನು ಸಕ್ರಿಯಗೊಳಿಸುತ್ತದೆ. ಇದು ತುರ್ತು ಪರಿಸ್ಥಿತಿ ಸೇರಿದಂತೆ ದೈನಂದಿನ ಜೀವನದ ಹಲವು ಅಂಶಗಳಲ್ಲಿ ನಿರ್ಣಾಯಕವಾಗಿದೆ ಎಂದು ಹೇಳಬಹುದು. ಇ–ಕಾಮರ್ಸ್ ಕ್ಷೇತ್ರದಲ್ಲಿ ದೂರಸಂಪರ್ಕವು ಮಹಾನ್ ಕ್ರಾಂತಿಯನ್ನುಂಟು ಮಾಡಿದೆ. ಆನ್‌ಲೈನ್ ಶಾಪಿಂಗ್, ಆನ್‌ಲೈನ್ ಮಾರುಕಟ್ಟೆಗಳು, ಡಿಜಿಟಲ್ ವಹಿವಾಟುಗಳಿಗೆ ಸಾಕಷ್ಟು ಅವಕಾಶ ಮಾಡಿಕೊಟ್ಟಿದೆ.


ಶಿಕ್ಷಣ ಸಂಸ್ಥೆಗಳು ದೂರಶಿಕ್ಷಣ ಕಾರ್ಯಕ್ರಮಗಳಿಗೆ ದೂರ ಸಂಪರ್ಕವನ್ನು ಬಳಸಿಕೊಳ್ಳುತ್ತವೆ. ಇದರಿಂದಾಗಿ ವಿಶ್ವದ ಯಾವುದೇ ಭಾಗದಿಂದಾದರೂ ಗುಣಮಟ್ಟದ ಶಿಕ್ಷಣವನ್ನು ಪಡೆದುಕೊಳ್ಳ ಬಹುದಾಗಿದೆ. ದೂರ ಸಂಪರ್ಕವು ಟೆಲಿಮೆಡಿಸಿನ್ ಸೇವೆಯನ್ನು ಕೂಡ ಸಕ್ರಿಯಗೊಳಿಸುತ್ತದೆ. ದೂರದ ಸ್ಥಳದಿಂದಲೇ ಸಮಾ ಲೋಚನೆ, ರೋಗ ನಿರ್ಣಯ ಮತ್ತು ಚಿಕಿತ್ಸೆಗೆ ಅವಕಾಶ ನೀಡುವುದರ ಮೂಲಕ ಸಕಾಲಿಕ ಮತ್ತು ನಿಖರವಾದ ವೈದ್ಯಕೀಯ ಮಾಹಿತಿಯನ್ನು ಒದಗಿಸುತ್ತದೆ. ಈ ಎಲ್ಲ ಉಪಯೋಗಗಳ ಜೊತೆಗೆ ಸರ್ಚ ಇಂಜಿನ್‌ಗಳು, ಆನ್‌ಲೈನ್ ಲೈಬ್ರರಿಗಳು ಮತ್ತು ಡೇಟಾಬೇಸ್‌ಗಳ ಮೂಲಕ ಅಪಾರ ಪ್ರಮಾಣದ ಮಾಹಿತಿಯನ್ನು ಒದಗಿಸಲು ಸಮರ್ಥವಿದೆ. ಆನ್‌ಲೈನ್



ಸುದ್ದಿ, ಸಾಮಾಜಿಕ ಮಾಧ್ಯಮ ವೇದಿಕೆಗಳಿಗೆ ಪ್ರವೇಶವನ್ನು ಕೂಡ ಒದಗಿಸುತ್ತದೆ.

ಇಷ್ಟೆಲ್ಲಾ ಉಪಯೋಗಗಳ ನಡುವೆಯೂ ದೂರ ಸಂಪರ್ಕ ವ್ಯವಸ್ಥೆಗಳು ಹ್ಯಾಕಿಂಗ್ ಮತ್ತು ಇತರೆ ಸೈಬರ್ ದಾಳಿಗಳಿಗೆ ಗುರಿಯಾಗುತ್ತಿರುವುದರಿಂದ ವೈಯಕ್ತಿಕ ಮಾಹಿತಿಯ ಕಳ್ಳತನದಂತಹ ಅಂಶಗಳು ವಿಶ್ವವನ್ನು ಚಿಂತಾಕ್ರಾಂತಗೊಳಿಸಿದೆ. ವಿದ್ಯುತ್ಕಾಂತೀಯ ವಿಕಿರಣ ದಿಂದ ಸಂಭಾವ್ಯ ಆರೋಗ್ಯ ಅಪಾಯಗಳ ಬಗ್ಗೆಯೂ ಎಚ್ಚರಿಕೆಯಿಂದಿರಬೇಕು. ಅಂದರೆ ದೂರಸಂಪರ್ಕ ಸಾಧನಗಳನ್ನು ಹಿತಮಿತವಾಗಿ, ಒಳ್ಳೆಯ ಉದ್ದೇಶಗಳಿ ಗಾಗಿ ಮಾತ್ರ ಬಳಸುವುದರತ್ತ ನಮ್ಮ ಚಿತ್ತವಿರಬೇಕಾಗುತ್ತದೆ.



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 16–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1586.23 ಅಡಿ |
| ಒಳ ಹರಿವು | 1040 ಕ್ಯುಸೆಕ್ |
| ಹೊರ ಹರಿವು | 1934 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.158 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1577.58 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 3.408 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

17–05–2025 – ಶನಿವಾರ

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವಾಷಾಢ |
| ಯೋಗ | : ಸಾಧ್ಯ |
| ಕರಣ | : ಕೌಳವ |
| ಸೂರ್ಯೋದಯ | : 05:46:11 |
| ಸೂರ್ಯಾಸ್ತ | : 19:00:46 |
| ರಾಹು ಕಾಲ | : 09:05–10:44 |
| ಯಮಘಂಡ ಕಾಲ | : 14:03–15:42 |
| ಗುಳಿಕ ಕಾಲ | : 05:46–07:26 |

## ಮೈಕ್ರೋ ನ್ಯೂಸ್

### ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 2025–26 ನೇ ಸಾಲಿನ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅವರು ತಿಳಿಸಿದ್ದಾರೆ.

ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 2ಬಿ, 3ಎ, 3ಬಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ಇತರೆ ಜನಾಂಗಕ್ಕೆ ಸೇರಿದ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿಯು ಪ್ರವರ್ಗ–1, ಎಸ್.ಸಿ ಮತ್ತು ಎಸ್.ಟಿ ಗೆ ರೂ.2.50 ಲಕ್ಷ ಹಾಗೂ ಪ್ರವರ್ಗ–2ಎ, 2ಬಿ, 3ಎ, 3ಬಿಗೆ ರೂ.1 ಲಕ್ಷ ಒಳಗಿರಬೇಕು. ಅರ್ಹ ಆಸಕ್ತ ವಿದ್ಯಾರ್ಥಿಗಳು https://shp.karnataka.gov.in ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜೂನ್ 16 ಕೊನೆಯ ದಿನವಾಗಿರುತ್ತದೆ. ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in ನ್ನು ನೋಡಬಹುದು.

ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಗೆ ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ/ತಾಲ್ಲೂಕು ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಡಿ.ದೇವರಾಜು ಅರಸು ಭವನದ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಚೇರಿ ಹಾಗೂ ಸಹಾಯವಾಣಿ ಸಂಖ್ಯೆ 8050770004/8050770005 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಡೆಂಗ್ಯೂ ಜ್ವರದ ಬಗ್ಗೆ ಎಚ್ಚರವಿರಲಿ



**■ ಹಂಪಿ ಟೈಮ್ಸ್ ಬಳ್ಳಾರಿ**

ಡೆಂಗ್ಯೂ ಜ್ವರದ ಅಪಾಯಗಳು ಮತ್ತು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ರೋಗ ಲಕ್ಷಣ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ದೇಶದಲ್ಲಿ ಪ್ರತಿ ವರ್ಷ ಮೇ 16 ರಂದು ರಾಷ್ಟ್ರೀಯ ಡೆಂಗ್ಯೂ ದಿನ ಆಚರಿಸಲಾಗುತ್ತದೆ ಎಂದು ಮಹಾನಗರ ಪಾಲಿಕೆಯ ಉಪ ಮಹಾಪೌರರಾದ ಡಿ.ಸುಕುಂ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಚೇರಿ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಸಭಾಂಗಣದಲ್ಲಿ ಶನಿವಾರ ಆಯೋಜಿಸಲಾಗಿದ್ದ "ಡೆಂಗ್ಯೂ ಸೋಲಿಸಲು ಹೆಜ್ಜೆಗಳು: ಪರಿಶೀಲಿಸಿ, ಸ್ವಚ್ಛಗೊಳಿಸಿ, ಮುಚ್ಚಿಡಿ" ಎಂಬ ಘೋಷವಾಕ್ಯದಡಿ "ರಾಷ್ಟ್ರೀಯ ಡೆಂಗ್ಯೂ" ದಿನಾಚರಣೆ ಅಂಗವಾಗಿ ಮಹಾನಗರ ಪಾಲಿಕೆಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಮೇಲ್ವಿಚಾರಕರು ಹಾಗೂ ಪೌರ ಕಾರ್ಮಿಕರಿಗೆ ಜಿಲ್ಲಾ ಮಟ್ಟದ ಪುನರ್ ಮನನ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಡೆಂಗ್ಯೂ ಜ್ವರದ ಬಗ್ಗೆ ಭಯ ಬೇಡ ಆದರೆ ಎಚ್ಚರವಿರಲಿ. ಎಲ್ಲರೂ ನಮ್ಮ ಸುತ್ತ ಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿಟ್ಟುಕೊಂಡು ಡೆಂಗ್ಯೂ ರೋಗ ಹರಡದಂತೆ ತಡೆಯೋಣ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ವೈ.ರಮೇಶ್ ಬಾಬು ಅವರು ಮಾತನಾಡಿ, ಜಿಲ್ಲೆಯಾದ್ಯಂತ ಡೆಂಗ್ಯೂ ಜ್ವರ ಹರಡುವುದನ್ನು ಎದುರಿಸಲು ಮತ್ತು ನಿಯಂತ್ರಿಸಲು ಆರೋಗ್ಯ ಇಲಾಖೆಯು ಮಾಡುತ್ತಿರುವ ನಿರಂತರ ಪ್ರಯತ್ನಗಳ ಭಾಗವಾಗಿ ಪ್ರತಿ ವರ್ಷ ಮೇ 16 ರಂದು ರಾಷ್ಟ್ರಿಯ ಡೆಂಗ್ಯೂ ದಿನವನ್ನು ಆಚರಿಸಲಾಗುತ್ತದೆ.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾ ಕಛೇರಿಯ ವಾರ್ಷಿಕವಾಗಿ ಆಯೋಜಿಸುವ ಈ ದಿನವು ಡೆಂಗ್ಯೂ (ಸೊಳ್ಳೆಯಿಂದ ಹರಡುವ ವೈರಸ್) ಬಗ್ಗೆ ಜಾಗೃತಿ ಮೂಡಿಸಲು ಮತ್ತು ತಡೆಗಟ್ಟುವಿಕೆ, ಶಿಕ್ಷಣ ಮತ್ತು ಆರಂಭಿಕ ಹಸ್ತಕ್ಷೇಪ ತಂತ್ರಗಳ ಮೂಲಕ ಸಾಮೂಹಿಕ ಕ್ರಮವನ್ನು ಉತ್ತೇಜಿಸಲು ಸಮರ್ಪಿಸಲಾಗಿದೆ ಹಾಗೂ ಜಿಲ್ಲೆಯಲ್ಲಿ ಯಾವುದೇ ಡೆಂಗಿ ಮರಣ ಪ್ರಕರಣಗಳು ವರದಿಯಾಗದಂತೆ ಸಮಯೋಚಿತರಾಗಿ ಕಾರ್ಯನಿರ್ವಹಿಸಲು ಹಾಗೂ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಶಸ್ತ್ರ ಚಿಕಿತ್ಸರಾದ ಡಾ.ಎನ್.ಬಸರೆಡ್ಡಿ ಮಾತನಾಡಿ, ಡೆಂಗ್ಯೂ ಎಂಬುದು ಸೋಂಕಿತ ಈಡಿಸ್ ಈಜಿಪ್ಟಿ ಸೊಳ್ಳೆಯ ಕಡಿತದಿಂದ ಹರಡುವ ವೈರಸ್ ಆಗಿದ್ದು, ಇದನ್ನು ಸಾಮಾನ್ಯವಾಗಿ ಡೆಂಗ್ಯೂ ಸೊಳ್ಳೆ ಎಂದು ಕರೆಯಲಾಗುತ್ತದೆ.

ಈ ರೋಗವು ಸೊಳ್ಳೆಗಳ ಸಂತಾನೋತ್ಪತ್ತಿ ಪರಿಸ್ಥಿತಿಗಳು ಸೂಕ್ತವಾಗಿರುವ ಮಳೆಗಾಲ ಮತ್ತು ನಂತರ ಹೆಚ್ಚಾಗುತ್ತದೆ. ಡೆಂಗ್ಯೂ ತಡೆಗಟ್ಟುವ ಕಾರ್ಯಕ್ರಮಗಳಲ್ಲಿ ಸಮುದಾಯ ಭಾಗವಹಿಸುವಿಕೆಯನ್ನುಉತ್ತೇಜಿಸುವುದು.

ಚಿಕಿತ್ಸೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ ನಿಖರವಾದ ಮಾಹಿತಿಯನ್ನು ಹರಡುವುದು.

ಸರ್ಕಾರದ ಉಪಕ್ರಮಗಳು ಮತ್ತು ಆರೋಗ್ಯ ಸೇವೆಯ ಲಭ್ಯತೆಯನ್ನು ಎತ್ತಿತೋರಿಸುವುದು.

ಡೆಂಗ್ಯೂ ಋತುವಿಗೆ ಮುನ್ನ ಮುಂಜಾಗ್ರತಾ ಕ್ರಮಕೈಗೊಳ್ಳಲು ಸ್ಥಳೀಯ ಅಧಿಕಾರಿಗಳನ್ನು ಸಜ್ಜುಗೊಳಿಸುವುದು ಎಂದು ತಿಳಿಸಿದರು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ಆರ್.ಅಬ್ದುಲ್ಲಾ ಅವರು ಪ್ರಾಸ್ತವಿಕವಾಗಿ ಮಾತನಾಡಿ, ರಾಜ್ಯಾದ್ಯಂತ ಡೆಂಗ್ಯೂ ಈಗ ಸ್ಥಳೀಯ ರೋಗವಾಗಿರುವುದರಿಂದ ಹೆಚ್ಚಿನ ಜನರು ಡೆಂಗ್ಯು ಸೋಂಕಿನ ಅಪಾಯದಲ್ಲಿದ್ದಾರೆ. ರಾಷ್ಟ್ರೀಯ ಡೆಂಗ್ಯೂ ದಿನ–2025 ನ್ನು ಡೆಂಗ್ಯೂ ಸೋಲಿಸುವ ಹೆಜ್ಜೆಗಳು: ಪರಿಶೀಲಿಸಿ, ಸ್ವಚ್ಛಗೊಳಿಸಿ, ಮುಚ್ಚಿಡಿ ಎಂಬ ಘೋಷವಾಕ್ಯದೊಂದಿಗೆ ಪ್ರಸ್ತುತ ಜಿಲ್ಲೆಯಲ್ಲಿ ಬೀಳುತ್ತಿರುವ ಬೇಸಿಗೆ ಮಳೆ ಹಾಗೂ ಮುಂಬರುವ ಮಳೆಗಾಲದ ದಿನಗಳಲ್ಲಿ ಡೆಂಗಿ ಜ್ವರ ಹರಡುವ ಈಡೀಸ್ ಸೊಳ್ಳೆಗಳ ಉತ್ಪತ್ತಿ ತಾಣಗಳು ಹೆಚ್ಚಾಗಿದ್ದು, ಡೆಂಗ್ಯೂ ಜ್ವರ ಪ್ರಕರಣವು ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿ ಪರಿಣಮಿಸುವ ಸಾಧ್ಯತೆ ಅಧಿಕವಾಗಿರುವ ಹಿನ್ನಲೆಯಲ್ಲಿ ಡೆಂಗ್ಯೂ ನಿಯಂತ್ರಣದ ಸಂಬಂಧ ಈಡೀಸ್ ಲಾರ್ವ ನಿರ್ಮೂಲನೆಯನ್ನು ತೀವ್ರಗೊಳಿಸುವುದು ಪ್ರಮುಖ ಗುರಿಯಾಗಿದೆ.

ಡೆಂಗ್ಯೂ ಜ್ವರ ನಿಯಂತ್ರಣದಲ್ಲಿ ಈಡೀಸ್ ಲಾರ್ವ ನಿರ್ಮೂಲನೆಯೇ ಅಸ್ತ್ರವಾಗಿದ್ದು, ಈಡೀಸ್ ಸೊಳ್ಳೆ ಉತ್ಪತ್ತಿ ತಾಣಗಳನ್ನು ಪರಿಶೀಲಿಸಿ, ಸ್ವಚ್ಛಗೊಳಿಸಿ, ಮುಚ್ಚಿಡುವುದರ ಮೂಲಕ ಈಡೀಸ್ ಉತ್ಪತ್ತಿಯನ್ನು ನಿಯಂತ್ರಿಸಬಹುದಾಗಿದೆ. ಈ ಸರಳ ವಿಧಾನದಿಂದ ಡೆಂಗ್ಯೂ ಜ್ವರ ಪ್ರಕರಣವನ್ನು ತಡೆಗಟ್ಟಬಹುದಾಗಿದ್ದು, ಸದರಿ ಚಟುವಟಿಕೆಯನ್ನು ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ ಹಾಗೂ ತಮ್ಮ ದೈನಂದಿನ ಕರ್ತವ್ಯದ ಭಾಗವಾಗಿ ಕೈಗೊಳ್ಳುವಂತೆ ಮಾಡುವುದು ಅಗತ್ಯವಾಗಿದೆ ಎಂದು ಹೇಳಿದರು.

**ಡೆಂಗ್ಯೂ ಜ್ವರದ ಲಕ್ಷಣಗಳು:**
ತೀವ್ರಜ್ವರ, ತೀವ್ರ ತಲೆನೋವು, ಕಣ್ಣುಗಳ ಹಿಂದೆ ನೋವು, ಸ್ನಾಯು ಮತ್ತು ಕೀಲುನೋವು, ವಾಕರಿಕೆ ಮತ್ತು ವಾಂತಿ, ಚರ್ಮದ ದದ್ದು, ಸೌಮ್ಯ ರಕ್ತಸ್ರಾವ (ಉದಾ: ಮೂಗಿನ ರಕ್ತಸ್ರಾವ, ಒಸಡುಗಳಿಂದ ರಕ್ತಸ್ರಾವ).

ಹೆಚ್ಚಿನ ಡೆಂಗ್ಯೂ ಪ್ರಕರಣಗಳು ಸೌಮ್ಯವಾಗಿರುತ್ತವೆ. ಆದರೆ ಕೆಲವು ಸಂದರ್ಭಗಳಲ್ಲಿ ಇದು ತೀವ್ರವಾದ ಡೆಂಗ್ಯೂಆಗಿ ಮುಂದುವರಿಯಬಹುದು. ಇದನ್ನು ಡೆಂಗ್ಯೂ ಹೆಮರಾಜಿಕ್ಜ್ವರ ಎಂದೂ ಕರೆಯುತ್ತಾರೆ. ಇದು ಆಂತರಿಕ ರಕ್ತಸ್ರಾವ, ಅಂಗಾಂಗ ವೈಫಲ್ಯ ಮತ್ತು ಸಾವಿಗೆ ಕಾರಣವಾಗಬಹುದೆಂದು ತಿಳಿಸಿದರು.

ಇದೇ ವೇಳೆ ಕಾರ್ಯಕ್ರಮದಲ್ಲಿ ಡೆಂಗ್ಯೂ ನಿಯಂತ್ರಣ ನಮ್ಮೆಲ್ಲರ ಜವಬ್ದಾರಿ ಎಂಬ ಭಿತ್ತಿ ಪತ್ರವನ್ನು ಬಿಡುಗಡೆಗೊಳಿಸಿದರು.

ಬಳಿಕ ಜಿಲ್ಲಾ ವಿಬಿಡಿಸಿ ಸಮಾಲೋಚಕರಾದ ಪ್ರತಾಪ್.ಹೆಚ್ ಅವರು ಮಹಾನಗರ ಪಾಲಿಕೆಯ ಆರೋಗ್ಯ ನಿರೀಕ್ಷಣಾಧಿಕಾರಿಗಳಿಗೆ, ಮೇಲ್ವಿಚಾರಕರಿಗೆ ಹಾಗೂ ಪೌರ ಕಾರ್ಮಿಕರಿಗೆ ಈಡೀಸ್ ಲಾರ್ವ ಉತ್ಪತ್ತಿ ತಾಣಗಳ ನಾಶ ಕಾರ್ಯದ ಕುರಿತು ತರಬೇತಿ ನೀಡಿದರು.

ಡೆಂಗ್ಯೂ ದಿನಾಚರಣೆ ಅಂಗವಾಗಿ ಜಿಲ್ಲಾ ಆಸ್ಪತ್ರೆ ಮುಂಭಾಗದಲ್ಲಿ ಮಾನವ ಸರಪಳಿ ನಿರ್ಮಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯಕ್ರಮ ಅಧಿಕಾರಿಗಳಾದ ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ.ವೀರೇಂದ್ರಕುಮಾರ್, ಆರ್.ಸಿ.ಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ವಿಬಿಡಿಸಿ ಕಾರ್ಯಕ್ರಮ ಅನುಷ್ಠಾನಾ ಅಧಿಕಾರಿಗಳಾದ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಈಶ್ವರ ದಾಸಪ್ಪನವರ ಸೇರಿದಂತೆ ರವೀಂದ್ರ ಜಿನಗಾ, ಮರಿಬಸವನ ಗೌಡ ಚಾನಾಳ್ ಹಾಗೂ ಶಕುಂತಲಾ.ಬಿ, ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ವಿಬಿಡಿಸಿ ಸಿಬ್ಬಂದಿ ವರ್ಗದವರು ಇತರರು ಉಪಸ್ಥಿತರಿದ್ದರು.

# ಗೃಹಜ್ಯೋತಿ ಫಲಾನುಭವಿಗಳು ನೋಂದಾಯಿಸಿಕೊಳ್ಳಲು ಸೂಚನೆ

**■ ಹಂಪಿ ಟೈಮ್ಸ್ ಕೊಪ್ಪಳ**

ಗೃಹಜ್ಯೋತಿ ಯೋಜನೆಯಡಿ ರಾಜ್ಯದಲ್ಲಿನ ಪ್ರತಿ ಮನೆಗೆ ತಿಂಗಳಿಗೆ ಗರಿಷ್ಠ 200 ಯೂನಿಟ್‌ಗಳವರೆಗೆ ಬಳಕೆಯ ಮಿತಿಯಲ್ಲಿ ಪ್ರತಿ ಗೃಹಬಳಕೆ ಗ್ರಾಹಕರ ಮಾಸಿಕ ಸರಾಸರಿ ಬಳಕೆಯ(ಆರ್ಥಿಕ ವರ್ಷ 2022–23 ರ ಬಳಕೆಯ ಆಧಾರದನ್ವಯ) ಯೂನಿಟ್‌ಗಳ ಮೇಲೆ ಶೇ.10 ರಷ್ಟು ಹೆಚ್ಚಿನ ಬಳಕೆಯ ಮಿತಿಗೆ ಅನುಮತಿಸಿ, ಅದಕ್ಕನುಗುಣವಾಗಿ ವಿದ್ಯುತ್ ಬಿಲ್ಲಿನ ಮೊತ್ತವನ್ನು ಉಚಿತವಾಗಿ ಒದಗಿಸಲು ಹಾಗೂ 200 ಯೂನಿಟ್‌ಗಳ ಬಳಕೆ ಮೀರಿದ ಗ್ರಾಹಕರು ಪೂರ್ಣ ವಿದ್ಯುತ್ ಬಿಲ್ಲನ್ನು ಪಾವತಿಸಲು ಸರ್ಕಾರ ಆದೇಶಿಸಿದೆ.

ಈ ಯೋಜನೆಯಡಿ ಗ್ರಾಹಕರು https://sevasindhugs.Karnataka.gov.in/ ನಲ್ಲಿ ನೋಂದಾಯಿಸಿಕೊಳ್ಳಬೇಕು. 200 ಯೂನಿಟ್‌ಗಳ ಬಳಕೆಯನ್ನು ಮೀರಿದ ಗ್ರಾಹಕರು ಸಂಪೂರ್ಣ ವಿದ್ಯುತ್ ಬಿಲ್ಲನ್ನು ಪಾವತಿಸಬೇಕು. ಗ್ರಾಹಕರು ಮಂಜೂರಾದ ಲೋಡ್‌ಗಿಂತ ಅಧಿಕ ವಿದ್ಯುತ್ ಬಳಕೆ ಮಾಡಿದಲ್ಲಿ ಜೆಸ್ಕಾಂನಿಂದ ನಿಯಮಾನುಸಾರ ದಂಡ ವಿಧಿಸಲಾಗುವುದು. ಆದ್ದರಿಂದ ಗ್ರಾಹಕರು ಹೆಚ್ಚಿನ ಲೋಡ್ ಅನ್ನು ಸಕ್ರಮಗೊಳಿಸಲು ಸಂಬಂಧಪಟ್ಟ ಜೆಸ್ಕಾಂ ಉಪ ವಿಭಾಗ ಕಚೇರಿಗಳಲ್ಲಿ ನೋಂದಾಯಿಸಿಕೊಳ್ಳಬೇಕೆಂದು ಜೆಸ್ಕಾಂ ಕೊಪ್ಪಳ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

14 ಭಾಷೆಗಳಲ್ಲಿ ಸುದ್ದಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS
TO REACH MORE AUIDIENCE
Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)
Display Advertisements
Examples: Brand promotions, Product launches, Corporate announcements
Public Notices and Announcements
Examples: Tender notices, Government announcements, Legal notices, Obituaries
Recruitment Advertisements
Examples: Company job openings, Walk-in interviews, Recruitment drives
Health and Wellness Advertisements
Examples: Hospitals or clinics, Medical equipment, Health supplements
Educational Advertisements
Examples: College admissions, Coaching center promotions, Training programs
Event Advertisements
Examples: Cultural programs, Exhibitions, Concerts or festivals
Retail Advertisements
Examples: Sales or discounts, New store openings
Entertainment Advertisements
Examples: Movie releases, TV show promotions, Theater events
Political Advertisements
Campaigns or announcements related to political parties or candidates.
Real Estate Advertisements
Ads for buying, selling, or renting property.
Matrimonial Advertisements
Personal ads for seeking marriage alliances. Examples: Bride or groom profiles, Community-specific ads
Product Advertisements
Examples: Electronics, Automobiles, FMCG products
contact for more information
M: 94486 33038
Email:- hampitimes@gmail.com

# 1ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

**■ ಹಂಪಿ ಟೈಮ್ಸ್ ಬಳ್ಳಾರಿ**

ಸಿರುಗುಪ್ಪ ತಾಲ್ಲೂಕಿನ ತೆಕ್ಕಲಕೋಟೆಯ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಯ 2025–26ನೇ ಸಾಲಿನ 01 ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಅವರು ತಿಳಿಸಿದ್ದಾರೆ. ಆಸಕ್ತ ಅರ್ಹ ವಿದ್ಯಾರ್ಥಿಗಳು ಮೇ 15 ರಿಂದ ಮೇ 31 ರ ವರೆಗೆ ಅರ್ಜಿ ಸಲ್ಲಿಸಬಹುದು. ಅರ್ಜಿಗಳನ್ನು ಸಿರುಗುಪ್ಪ ತಾಲ್ಲೂಕಿನ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕಚೇರಿ ಮತ್ತು ತೆಕ್ಕಲಕೋಟೆಯ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಯಲ್ಲಿ ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಿರುಗುಪ್ಪ ತಾಲ್ಲೂಕಿನ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕಚೇರಿ ದೂ.08396–222003 ಗೆ ಸಂಪರ್ಕಿಸಬಹುದು.

# ಹೇಳಿದ್ದನ್ನ ಮಾಡಿದ್ದೇವೆ, ಮಾಡೋದನ್ನ ಹೇಳ್ತೀವಿ

**ಮೊದಲ ಪುಟದಿಂದ**

ರೂ.3,000 ಕೋಟಿ ರೂಗಳನ್ನು ಕೆಕೆಆರ್‌ಡಿಬಿಗೆ ನೀಡಿತ್ತು. 371ಜೆ ಕಲ್ಯಾಣ ಕರ್ನಾಟಕದ ಅಭಿವೃದ್ದಿಗೆ ಕೇಂದ್ರ ಸರ್ಕಾರ ತಿದ್ದುಪಡಿ ಮಾಡಿದ್ದು ಇದರ ಅಭಿವೃದ್ದಿಗೆ ಕೇಂದ್ರ ಅನುದಾನ ನೀಡಬೇಕಿತ್ತು. ಆದರೆ ಒಂದು ಬಿಡಿಗಾಸು, ಒಂದೇ ಒಂದು ರೂಪಾಯಿಯನ್ನು ನೀಡಿಲ್ಲ ಎಂದರು.

ಮೇ.20 ರಂದು ಹೊಸಪೇಟೆಯಲ್ಲಿ ನಡೆಯುವ ಸಮಾರಂಭದಲ್ಲಿ 1,03,000 ಜನರಿಗೆ ಕಂದಾಯ ಇಲಾಖೆಯಿಂದ ಆಸ್ತಿಯ ಹಕ್ಕುಪತ್ರಗಳನ್ನು ನೀಡಲಾ ಗುತ್ತದೆ. ಕಳೆದೆರಡು ವರ್ಷಗಳಲ್ಲಿ ಸರ್ಕಾರ ಜನರಿಗಾಗಿ ಮಾಡಿದ ಕೆಲಸಗಳನ್ನು ಜನರಿಗೆ ಸಮರ್ಪಣೆ ಮಾಡಲು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದು ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಜನರು ಬರಲಿದ್ದಾರೆ. ಅಂದಾಜು ಮೂರು ಲಕ್ಷಕ್ಕಿಂತ ಹೆಚ್ಚಿನ ಜನರು ಈ ಸಮಾರಂಭದಲ್ಲಿ ಭಾಗಿಯಾಗುವ ನಿರೀಕ್ಷೆ ಇದೆ.

ಕಾರ್ಯಕ್ರಮದಲ್ಲಿ ವಿಶೇಷವಾಗಿ ಲೋಕಸಭಾ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷರು ಹಾಗೂ ರಾಜ್ಯಸಭಾ ವಿರೋಧ ಪಕ್ಷದ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಸಂಪುಟದ ಸಚಿವರು, ಶಾಸಕರು ಭಾಗವಹಿಸುತ್ತಿದ್ದಾರೆ. ಇದು ಸರ್ಕಾರದ ಕಾರ್ಯಕ್ರಮವಾಗಿದ್ದು ವಿರೋಧ ಪಕ್ಷದ ನಾಯಕರನ್ನು ಸಹ ಅಹ್ವಾನಿಸಲಾಗಿದ್ದು, ಎಲ್ಲಾ ಇಲಾಖೆ ಅಧಿಕಾರಿಗಳ ಸಮನ್ವಯತೆಯಿಂದ ಬೃಹತ್ ಕಾರ್ಯಕ್ರಮ ನಡೆಯಲಿದೆ ಎಂದರು.

ಈ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಕ್ಫ್, ವಸತಿ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್‌ಖಾನ್, ಪ್ರವಾಸೋದ್ಯಮ ಹಾಗೂ ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ್, ನಗರಾಭಿ ವೃದ್ಧಿ ಸಚಿವ ಭೈರತಿ ಸುರೇಶ್, ಸಣ್ಣನೀರಾವರಿ ಸಚಿವ ಎನ್.ಎಸ್.ಭೋಸರಾಜು, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಕೃಷಿ ಸಚಿವರಾದ ಚೆಲುವರಾಯ ಸ್ವಾಮಿ, ಯೋಜನಾ ಸಚಿವರಾದ ಡಿ.ಸುಧಾಕರ್, ಸಂಸದ ಈ.ತುಕಾರಾಂ, ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್, ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್, ಶಾಸಕ ಹೆಚ್.ಆರ್.ಗವಿಯಪ್ಪ, ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್, ಹರಪನಹಳ್ಳಿ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ, ಕಂಪ್ಲಿ ಶಾಸಕ ಗಣೇಶ್, ಬಳ್ಳಾರಿ ಗ್ರಾಮಾಂತರ ಶಾಸಕ ಬಿ.ನಾಗೇಂದ್ರ, ಸಿಂಧನೂರು ಶಾಸಕರಾದ ಹಂಪನಗೌಡ ಬಾದರ್ಲಿ, ಮೊಣಕಾಲ್ಮೂರು ಶಾಸಕ ಎನ್.ವೈ.ಗೋಪಾಲಕೃಷ್ಣ, ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿರಾಜ್ ಶೇಖ್, ಬಳ್ಳಾರಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಬಿ.ವಿ.ಶಿವಯೋಗಿ, ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಸಿಇಓ ಮೊಹಮ್ಮದ್ ನೋಂಗ್ಜಾಯ್ ಅಕ್ರಮ್ ಷಾ ಅಲಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶ್ರೀಹರಿ ಬಾಬು. ಬಿ.ಎಲ್, ಬಳ್ಳಾರಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಪಂ ಸಿಇಓ ಮೊಹಮ್ಮದ್ ಹ್ಯಾರಿಸ್ ಸುಮೇರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ ಇತರರಿದ್ದರು.